1 ವಿಧಾನ ಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣ

ಸನ್ಮಾನ್ಯ ರಾಜ್ಯಪಾಲರಾದ ಶ್ರೀಮತಿ ವಿ ಎಸ್ ರಮಾದೇವಿಯವರು ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸಂಯುಕ್ತಾಧಿವೇಶನವನ್ನು ಉದ್ದೇಶಿಸಿ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 00 ಗಂಟೆಗೆ ಮಾಡಿದ ಭಾಷಣ

ಸೋಮವಾರ 21 ನೇ ಜನವರಿ 200 ,

ರಾಜ್ಯಪಾಲರು ಬೆಳಿಗ್ಗೆ 11 00 ಗಂಟೆಗೆ ವಿಧಾನಸೌಧದ ಮುಖ್ಯದ್ವಾರದ ಬಳಿ ಇರುವ ದ್ವಾರಮಂಟಪಕ್ಕೆ ಆಗಮಿಸಿದರು ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಅಧ್ಯಕ್ಷರು, ಮಾನ್ಯ ಸಭಾಪತಿಯವರು, ಮಾನ್ಯ ಮುಖ್ಯ ಮಂತ್ರಿಯವರು, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ವಿಧಾನ ಸಭೆಯ ಕಾರ್ಯದರ್ಶಿಯವರು ಮತ್ತು ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ಸ್ವಾಗತಿಸಿದರು ನಂತರ ಪೂರ್ವಭಾಗದ ಮೆಟ್ಟಿಲುಗಳ ಮೂಲಕ ರಾಜ್ಯಪಾಲರು ಆಗಮಿಸಿದರು ನಂತರ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು

ವಿಧಾನಸಭೆಯ ಕಾರ್ಯದರ್ಶಿ — ವಿಧಾನಪರಿಷತ್ತಿನ ಕಾರ್ಯದರ್ಶಿ

ಮಾನ್ಯ ಅಧ್ಯಕ್ಷರು — ಮಾನ್ಯ ಸಭಾಪತಿಯವರು

ರಾಜ್ಯಪಾಲರು

ಎಡಿಸಿ

ಈ ರೀತಿಯ ಮೆರವಣಿಗೆಯು ವಿಧಾನ ಸಭಾ ಸದನದ ಕಡೆಗೆ ಹೊರಟಿತು ಸಭಾ ಸದನದ ದ್ವಾರದ ಬಳಿ ಮೆರವಣಿಗೆ ಒಂದ ಕೂಡಲೇ ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗ ತಿಳಿಸಿದರು ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು ರಾಜ್ಯಪಾಲರು ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವತನಕ ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿದ್ದರು

ಸಭಾ ಸದನದ ವೇದಿಕ ಮುಂದ ಬಂದ ಮರವಣಿಗೆಯು ಇಬ್ಭಾಗವಾಯಿತು ವೇದಿಕೆಯ ಮೇಲ ಮಾನ್ಯ ಅಧ್ಯಕ್ಷರು ರಾಜ್ಯಪಾಲರ ಎಲಭಾಗದಲ್ಲಿ ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡಭಾಗದಲ್ಲಿ ಕುಳಿತುಕೊಂಡರು ರಾಜ್ಯಪಾಲರು ವೇದಿಕೆಯ ಮಧ್ಯಭಾಗದಲ್ಲಿನ ಆಸನದಲ್ಲಿ ಕುಳಿತುಕೂಂಡರು ಉಭಯ ಕಾರ್ಯದರ್ಶಿಗಳವರು ವೇದಿಕೆಯ ಮುಂದುಗಡೆ ಇರುವ

ಆಸನದಲ್ಲಿ ಕುಳಿತುಕೊಂಡರು

ಸನ್ಮಾನ್ಯ ರಾಜ್ಯಪಾಲರು ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೇ,

ಕರ್ನಾಟಕ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ನಾನು ತಮ್ಮೆಲ್ಲರನ್ನು ತುಂಬಾ ಸಂತೋಷದಿಂದ ಸ್ವಾಗತಿಸುತ್ತೇನೆ 2001ರ ಫೆಬ್ರುವರಿ 26ರಂದು ತಮ್ಮನ್ನು ಉದ್ದೇಶಿಸಿ ನಾನು ಭಾಷಣ ಮಾಡಿದ ಸಂದರ್ಭದಲ್ಲಿ ಗುಜರಾತ್‌ನಲ್ಲಿ ಸಂಭವಿಸಿದ ತೀವ್ರ ಭೂಕಂಪದ ಆಘಾತದಿಂದ ದೇಶ ಇನ್ನೂ ಚೇತರಿಸಿಕೊಳ್ಳುತ್ತಿತ್ತು ತದನಂತರ ಕರ್ನಾಟಕ ರಾಜ್ಯ, ನಮ್ಮ ದೇಶ ಮತ್ತು ಇಡೀ ವಿಶ್ವ ದುರಂತಗಳ ಸರಣಿಯನ್ನೇ ಎದುರಿಸಬೇಕಾಯಿತು ಬಹುಮುಖ್ಯವಾದ ಮುಂಗಾರು ಬಿತ್ತನೆ ಸಮಯದಲ್ಲಿ ಮಳೆ ಬೀಳದ ಕಾರಣ ಕರ್ನಾಟಕದ ಬಹಳಷ್ಟು ತಾಲ್ಲೂಕುಗಳಲ್ಲಿ ಬರಗಾಲ ಪರಿಸ್ಥಿತಿ ತಲೆದೋರಿದೆ 11ನೆಯ ಸಪ್ಟೆಂಬರ್ 2001 ರಂದು ನ್ಯೂಯಾರ್ಕ್‌ನ ವಿಶ್ವ ವಾಣಿಜ್ಯ ಕೇಂದ್ರದ ಅವಳಿ ಗೋಪುರಗಳ ಮೇಲೆ ಮತ್ತು ವಾಷಿಂಗ್‌ಟನ್‌ನ ಪೆಂಟಗಾನ್ ಕಟ್ಟಡದ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯಿಂದಾಗಿ ಇಡೀ ವಿಶ್ವ ದುಃಖ ಸಾಗರದಲ್ಲಿ ಮುಳುಗಿತು ಇದರಿಂದ ಭಯೋತ್ಪಾದನೆಯ ಅನಿಷ್ಟಗಳ ಬಗ್ಗೆ ಹೊಸ ಅರಿವು ಮೂಡಿತು ಭಾರತದಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಧಾನ ಸಭೆಯ ಮೇಲೆ ಹಾಗೂ ಕಳೆದ ಡಿಸೆಂಬರ್ 13ರಂದು ಸಂಸತ್ ಭವನದ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಗಳು ನಮ್ಮ ಪ್ರಜಾಪ್ರಭುತ್ವದ ಮೇಲೆಯೇ ಎಸಗಿದ ಆಕ್ರಮಣವಾಗಿದೆ ಭದ್ರತಾ ಸಿಬ್ಬಂದಿಯ ಜಾಗೃತ ಕಾರ್ಯಾಚರಣೆಯಿಂದಾಗಿ ಸಂಸತ್ ಭವನದ ಮೇಲೆ ನಡೆದ ದಾಳಿ ಯಶಸ್ವಿಯಾಗಲಿಲ್ಲ ತಮ್ಮ ಪ್ರಾಣವನ್ನು ಬಲಿಗೊಟ್ಟು ನಮ್ಮ ಅನೇಕ ಸಂಸತ್ ಸದಸ್ಯರನ್ನು ಹಾಗೂ ದೇಶದ ಪವಿತ್ರತೆಯನ್ನು ಕಾಪಾಡಿದ ಆ ಭದ್ರತಾ ಸಿಬ್ಬಂದಿಗೆ ಗೌರವ ಸಲ್ಲಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಈ ಘಟನೆಗಳಿಂದಾಗಿ, ಮೊದಲೇ ಮಂದಗತಿಯಲ್ಲಿದ್ದ ವಿಶ್ವ ಅರ್ಥ ವ್ಯವಸ್ಥೆಯಲ್ಲಿ ಮತ್ತಷ್ಟು ಹಿನ್ನಡೆ ಉಂಟಾಗಿದ್ದು, ಅದರ ಪರಿಣಾಮ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಕೂಡ ಉಂಟಾಗಿದೆ ಆದ್ದರಿಂದ ಈಗ ನಾವು ಒಂದು ಕಷ್ಟಕರ ಪರಿಸ್ಥಿತಿಯಲ್ಲಿದ್ದೇವೆ ನಮಗೆ ಎದುರಾಗಿರುವ ಈ ಎಲ್ಲ ಸವಾಲುಗಳನ್ನು ಎದುರಿಸಲು ಸಮಾಜದ ಎಲ್ಲ ವರ್ಗಗಳ ಒಮ್ಮತದ ಸಹಕಾರ ಹಾಗೂ ಪ್ರಯತ್ನ ಅಗತ್ಯವಾಗಿದೆ

2 ಪ್ರಸಕ್ತ ವರ್ಷ, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಒಟ್ಟಾರೆ ಶಾಂತಿಯುತವಾಗಿದೆ ಭಯೋತ್ಪಾದಕರಿಂದ ಮತ್ತು ರಾಷ್ಟ್ರ ವಿರೋಧ ಚಟುವಟಿಕೆಗಳಿಂದ ಉದ್ಭವಿಸಬಹುದಾದ ಯಾವುದೇ ಬೆದರಿಕೆಗಳನ್ನು ನಿಭಾಯಿಸುವುದಕ್ಕೆ ಜಿಲ್ಲಾ ಹಾಗೂ ಪೊಲೀಸ್ ಆಡಳಿತವನ್ನು ಸನ್ನದ್ಧಗೊಳಿಸಲು ರಾಜ್ಯ ಸರ್ಕಾರ ಕ್ರಮ ಕೈಕೊಂಡಿದೆ ರಾಜ್ಯದಲ್ಲಿ ಕೋಮು ಸೌಹಾರ್ದತೆ ಹಾಗು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಅತ್ಯಂತ ಮುತುವರ್ಜಿ ವಹಿಸಲಾಗುತ್ತಿದೆ

ವಾಹನ ಸೌಲಭ್ಯ, ಸಂಪರ್ಕ ಶಸ್ತ್ರಾಸ್ತ್ರ ಮತ್ತು ತರಬೇತಿ ಇವುಗಳಲ್ಲಿ ಸುಧಾರಣೆ ತರುವ ಮೂಲಕ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ಕ್ರಮಗಳನ್ನು ಪೊಲೀಸ್ ಪಡೆಗಳನ್ನು ಆಧುನೀಕರಣಗೊಳಿಸುವ ಯೋಜನೆಯ ಅಡಿಯಲ್ಲಿ ಮುಂದುವರಿಸಲಾಗುತ್ತಿದೆ ಈ ವರ್ಷ ಮೂರು ಮಹಿಳಾ ಪೊಲೀಸ್ ಠಾಣೆಗಳೂ ಸೇರಿದಂತೆ 11 ಹೊಸ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲಾಗಿದೆ ಬೆಂಗಳೂರು ನಗರದ ಸೂಕ್ಷ್ಮ ಪ್ರದೇಶಗಳಲ್ಲಿನ 49 ಪೊಲೀಸ್ ಠಾಣೆಗಳನ್ನು ಹಾಗೂ ಸೂಕ್ಷ್ಮ ಗಡಿ ಪ್ರದೇಶಗಳಲ್ಲಿನ 100 ಪೊಲೀಸ್ ಠಾಣೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ

3 2001ರ ಜುಲೈ ಮತ್ತು ಆಗಸ್ಟ್‌ನಲ್ಲಿ ಮಳೆಯ ವೈಪಲ್ಯದಿಂದಾಗಿ ರಾಜ್ಯ ಬರಗಾಲ ಪರಿಸ್ಥಿತಿಗೆ ಒಳಗಾಗಿದೆ 151 ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. 903 ಕೋಟಿ ರೂಪಾಯಿಗಳ ಹೆಚ್ಚುವರಿ ಋಣಕಾಸು ನೆರವು ಕೋರಿ ಭಾರತ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದ್ದರೂ ಭಾರತ ಸರ್ಕಾರ ಯಾವುದೇ ಹೆಚ್ಚಿನ ಹಣಕಾಸು ನೆರವನ್ನು ಒದಗಿಸಿರುವುದಿಲ್ಲ ನನ್ನ ಸರ್ಕಾರ ಬಹತೇಕವಾಗಿ ತನ್ನ ಆರ್ಥಿಕ ಸಂಪನ್ಮೂಲಗಳಿಂದಲೇ ಪ್ರಕೃತಿ ವಿಕೋಪದ ಪರಿಹಾರಕ್ಕಾಗಿ 103 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ ಭಾರತ ಸರ್ಕಾರವು ತನ್ನ ಪಾಲಿನ 58 72 ಕೋಟಿ ರೂಪಾಯಿಗಳನ್ನಷ್ಟೇ ನೀಡಿದೆ ಭಾರತ ಸರ್ಕಾರ ' ಕೂಲಿಗಾಗಿ ಕಾಳು ' ಕಾರ್ಯಕ್ರಮದ ಅಡಿಯಲ್ಲಿ ರಾಜ್ಯಕ್ಕೆ ಒಂದು ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿದೆ ಹಂಚಿಕೆ ಮಾಡಲಾದ ಎಲ್ಲಾ ಆಹಾರ ಧಾನ್ಯಗಳನ್ನು ನಿಗದಿತ ಸಂಸ್ಥೆಗಳು 45 ದಿವಸಗಳ ಒಳಗಾಗಿ ಸಾಗಿಸಿರುವುದು ತೃಪ್ತಿಕರ ವಿಷಯವಾಗಿದೆ ಈ ಆಹಾರ ಧಾನ್ಯಗಳ ಬಹುಭಾಗವನ್ನು ಬರಗಾಲ ಪೀಡಿತ ಜಿಲ್ಲೆಗಳಿಗೆ ಈಗಾಗಲೇ ಎಳಸಲಾಗಿದ

4 ಕೃಷಿ ರಾಜ್ಯದ ಆರ್ಥಿಕ ಬೆನ್ನೆಲುಬು ಈ ವಲಯವು ಈಗ ತಂತ್ರ ಜ್ಞಾನವನ್ನು ಬಳಸಿಕೊಳ್ಳುವ ಅಗತ್ಯತೆ ಇದೆ ಮತ್ತು ಹವಾಮಾನ ವೈಪರೀತ್ಯಗಳಿಂದ ಹಾಗೂ ಕೃಷಿ ಪದಾರ್ಥಗಳ ಬೆಲೆಗಳಲ್ಲಿನ ಡೋಲಾಯಮಾನ ಪರಿಸ್ಥಿತಿಗಳಿಂದ ರೈತರನ್ನು ರಕ್ಷಿಸಬೇಕಾಗಿದೆ ಸರ್ಕಾರವು ಕರ್ನಾಟಕ ಕೃಷಿ ಬೆಲೆಗಳ ಆಯೋಗವನ್ನು ರಚಿಸಿದ್ದು ಕಾಲಕಾಲಕ್ಕೆ ಈ ಆಯೋಗವು ಮಾಡುತ್ತಿರುವಂತಹ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುತ್ತಿದ ನನ್ನ ಸರ್ಕಾರವು ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯನ್ನು ಅನುಷ್ಠಾನಗೊಳಿಸಿದೆ ಮತ್ತು ರೈತರ ಹಿತ ಕಾಪಾಡಲು ಅಗತ್ಯವನಿಸಿದಾಗ ಮಾರುಕಟ್ಟೆ ಪ್ರವೇಶಿಸಲು ಸಿದ್ಧವಾಗಿದ

5 2001-02ನೇ ಸಾಲಿನಲ್ಲಿ 102 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆಯ ಗುರಿ ಇಟ್ಟುಕೊಳ್ಳಲಾಗಿತ್ತು ಪ್ರತಿಕೂಲ ಹವಾಮಾನ ಪರಿಸ್ಥಿತಿಗಳ ಕಾರಣದಿಂದಾಗಿ ಸುಮಾರು 83 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆ ಆಗಲಿದ ಎಂದು ಅಂದಾಜು ಮಾಡಲಾಗಿದ ಆದರೆ ಹವಾಮಾನ ಪರಿಸ್ಥಿತಿ ಅನುಕೂಲಕರವಾಗಿರುತ್ತದೆಂದು ನಿರೀಕ್ಷಿಸಿ, 2002 03ನೇ ಸಾಲಿಗೆ 104 ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳ ಉತ್ಪಾದನೆಯ ಗುರಿಯನ್ನು ಇಟ್ಟುಕೊಳ್ಳಲಾಗಿದೆ

6 ಆಧುನಿಕ ಕೃಷಿಯ ಹಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ರೈತ ಮಿತ್ರ ಯೋಜನ ಎಂಬ ಒಂದು ಹೊಸ ಕಾರ್ಯಕ್ರಮವನ್ನು ಕಳೆದ ವರ್ಷ ರೂಪಿಸಲಾಗಿದೆ 745 ಹೋಬಳಿಗಳ ಪೈಕಿ, 741 ಹೋಬಳಿಗಳಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲಾಗಿದ ಈ ಕೇಂದ್ರಗಳು ಕೃಷಿಕ ಸಮುದಾಯದ ತಾಂತ್ರಿಕ ಅಗತ್ಯತೆಗಳನ್ನು ಪೂರೈಸುವ ವಿವಿಧ ಬಗೆಯ ಸಮಾಲೋಚನಾ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತಿವ ಎಲ್ಲಾ ಜಿಲ್ಲಾ ಕಚೇರಿಗಳನ್ನು ಕಂಪ್ಯೂಟರ್ ಜಾಲದಲ್ಲಿ ತರಲಾಗಿದ್ದು 2002ರ ಮಾರ್ಚ್ ವೇಳೆಗೆ ಈ ಜಾಲವನ್ನು 100 ರೈತ ಸಂಪರ್ಕ ಕೇಂದ್ರಗಳಿಗೂ ಸಹ ವಿಸ್ತರಿಸಲಾಗುವುದು ಅನೇಕ ಕೃಷಿ ಪದ್ಧತಿಗಳ ಪ್ಯಾಕೇಜಿನ ವಿವರಗಳನ್ನು, ಪರಿಕರ ದಾಸ್ತಾನು ಸ್ಥಿತಿಯನ್ನು ಮತ್ತು ತಾಂತ್ರಿಕ ವಿವರಗಳನ್ನು ಒದಗಿಸುವಂತಹ ಒಂದು ವೆಬ್ ಸೈಟನ್ನು ಪ್ರಾರಂಭಿಸಲಾಗಿದೆ ಅದನ್ನು ಹವಾಮಾನ ಮುನ್ಸೂಚನೆ ಹಾಗೂ ಮಾರುಕಟ್ಟೆ ಮಾಹಿತಿಯನ್ನು ಸೇರಿಸಿ ತಹಲ್‌ವರೆಗೆ ಮತ್ತಷ್ಟು ಪರಿಷ್ಕರಿಸಲಾಗುತ್ತಿದ

7 ಜಲಾನಯನ ಪ್ರದೇಶದ ಅಭಿವೃದ್ಧಿ ಬಗ್ಗೆ ನಾವು ಕೈಗೊಂಡ ಕ್ರಮಗಳು ತುಂಬಾ ವಿವೇಕ ಪೂರ್ಣವಾಗಿದ್ದು ಕೃಷಿ ಮತ್ತು ಇತರೆ ತತ್ಸಂಬಂಧಿ ಚಟುವಟಿಕೆಗಳ ಅಭಿವೃದ್ಧಿಯ ವ್ಯಾಪಕ ಮಾರ್ಗವಾಗಿದೆ ಎಂಬುದು ಅನುಭವದಿಂದ ಕಂಡುಬಂದಿದೆ ಜಲಾನಯನ ಅಭಿವೃದ್ಧಿಗಾಗಿ ಒಂದು ಪ್ರತ್ಯೇಕ ಇಲಾಖೆಯು 2000-01ನೇ ಸಾಲಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಅನೇಕ ಕೇಂದ್ರ ಪುರಸ್ಕೃತ ಹಾಗೂ ವಿದೇಶಿ ನೆರವಿನ ಯೋಜನೆಗಳಡಿ ಭಾರೀ ಪ್ರಮಾಣದ ಭೂಪ್ರದೇಶಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ

8 ರೈತರ ಆದಾಯವನ್ನು ಹೆಚ್ಚಿಸುವುದರಲ್ಲಿ ತೋಟಗಾರಿಕೆ, ಪ್ರಮುಖ ಪಾತ್ರ ವಹಿಸುತ್ತದೆ ತೋಟಗಾರಿಕೆಯ ಅಭಿವೃದ್ಧಿಗೆ ಇರುವ ವಿಪುಲ ಅವಕಾಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ವಲಯಕ್ಕೆ ವಿಶೇಷ ಗಮನ ನೀಡಲಾಗುವುದು ಕೃಷಿ ಹವಾಮಾನ ಯೋಜನೆ ಮತ್ತು ಮಾಹಿತಿ ಬ್ಯಾಂಕನ್ನು ಸ್ಥಾಪಿಸುವುದಕ್ಕಾಗಿ ಇಸ್ರೋದ ಪ್ರಾದೇಶಿಕ ದೂರಸಂವೇದಿ ಸೇವಾ ಕೇಂದ್ರವು ರೂಪಿಸಿರುವ ಯೋಜನೆಯಲ್ಲಿ ತೋಟಗಾರಿಕೆ ಇಲಾಖೆ ಸಕ್ರಿಯವಾಗಿ ಪಾಲ್ಗೊಂಡಿದೆ ಈ ಬ್ಯಾಂಕು ರೈತರಿಗೆ ಅಗತ್ಯವಿರುವಂಥ ಬಹುಮುಖ್ಯವಾದ ಮಾಹಿತಿಯನ್ನು ಪಡೆಯಲು ಏಕಗವಾಕ್ಷಿ ವಿಧಾನವನ್ನು ಒದಗಿಸುತ್ತದೆ ಪ್ರಾಯೋಗಿಕ ಆಧಾರದ ಮೇಲೆ ಈ ಯೋಜನೆಯನ್ನು ತುಮಕೂರು, ಬಿಜಾಪುರ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೈಗತ್ತಿಕೊಳ್ಳಲಾಗುವುದು

9 ರಾಜ್ಯದಲ್ಲಿ ಪಶುವೈದ್ಯಕೀಯ ಸೇವೆಗಳ ಸುಧಾರಣೆಗಾಗಿ ಮಾಡುತ್ತಿರುವ ಪ್ರಯತ್ನಗಳ ಭಾಗವಾಗಿ, ಪ್ರತಿ ವರ್ಷ 200 ಪ್ರಾಥಮಿಕ ಪಶುವೈದ್ಯಕೀಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ ಪಶು ಆರೋಗ್ಯ ಮತ್ತು ಪಶುವೈದ್ಯಕೀಯ ಜೈವಿಕ ಸಂಸ್ಥೆಯು ಕುರಿಗಳಿಗೆ ಬರುವ ಬ್ಲೂಟಂಗ್ ರೋಗಕ್ಕೆ ಲಸಿಕೆಯನ್ನು ಕಂಡುಹಿಡಿದಿದ ಮತ್ತು ವನ್ಯಮೃಗಗಳಿಗೆ ಬನ್ನೇರುಘಟ್ಟದಲ್ಲಿ ಪ್ರಯೋಗ ಶಾಲೆಯನ್ನು ಸ್ಥಾಪಿಸುತ್ತಿವ ಇದನ್ನು ಸ್ವಾವಲಂಭಯಾಗುವಂತೆ ಮಾಡುವುದಕ್ಕಾಗಿ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನ ಅಭಿವೃದ್ಧಿ ಮಂಡಳಿಯನ್ನು ನಿಗಮವನ್ನಾಗಿ

ಪರಿವರ್ತಿಸಲಾಗಿದೆ ಬೆಂಗಳೂರು ನಗರದಲ್ಲಿರುವ ಕಸಾಯಿಖಾನೆಯನ್ನು ಆಧುನೀಕರಣಗೊಳಿಸುವ ಕೆಲಸವನ್ನು ಕೈಗೊಳ್ಳಲಾಗಿದ ಮತ್ತು ಮೈಸೂರು, ಮಂಗಳೂರು ಬೆಳಗಾಂ, ಗುಲ್ಬರ್ಗ ಮತ್ತು ಧಾರವಾಡಗಳಲ್ಲಿರುವ ಕಸಾಯಿ ಖಾನಗಳನ್ನು ಆಧುನೀಕರಣಗೊಳಿಸಲು ಸೂಕ್ತ ಹಣಕಾಸು ನರವು ನೀಡುವಂತೆ ಕೋರಿ ಭಾರತ ಸರ್ಕಾರಕ್ಕೆ ಪ್ರಸ್ತಾವಗಳನ್ನು ಸಲ್ಲಿಸಲಾಗುತ್ತಿದೆ ಗ್ರಾಮೀಣ ಪ್ರದೇಶಗಳಲ್ಲಿ ಕೃತಕ ಗರ್ಭಧಾರಣೆಯ ಪ್ರಯತ್ನಗಳನ್ನು ಹಂತ ಹಂತವಾಗಿ ಖಾಸಗೀಕರಣಗೊಳಿಸಲು ಉದ್ದೇಶಿಸಲಾಗಿದೆ ಈ ಪ್ರಯತ್ನದಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳನ್ನು ತೊಡಗಿಸಿಕೊಳ್ಳಲಾಗುವುದು ವಿಶೇಷವಾಗಿ ಉತ್ತರ ಭಾಗದ ಜಿಲ್ಲೆಗಳಲ್ಲಿ ಹೆಚ್ಚು ಪ್ರಯೋಗಾಲಯಗಳನ್ನು ಸ್ಥಾಪಿಸಿ ಜಾನುವಾರುಗಳ ರೋಗ ಪತ್ತೆ ಹಚ್ಚುವ ಸೌಕರ್ಯವನ್ನು ಇನ್ನಷ್ಟು ಹೆಚ್ಚಿಸಲು ಉದ್ದೇಶಿಸಲಾಗಿದೆ

10 ಸಹಕಾರ ವಲಯದಲ್ಲಿ ಕೃಷಿ ಮಾರಾಟ ಇಲಾಖೆಯು ಪ್ರಮುಖ ಮಾರುಕಟ್ಟೆಗಳಲ್ಲಿ ಆನ್‌ಲೈನ್ ಬೆಲೆ ಮಾಹಿತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುತ್ತಿದೆ ಇದರಿಂದ ರೈತರಿಗೆ ಇತ್ತೀಚಿನ ಬೆಲೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಲ್ಲಾ ಮಾರುಕಟ್ಟೆ ಸಮಿತಿಗಳಿಗೆ ಗಣಕಯಂತ್ರ ಮತ್ತು ಇಂಟರ್‌ನೆಟ್ ಸೌಲಭ್ಯಗಳನ್ನು ಒದಗಿಸಲಾಗುವುದು ಗ್ರಾಮೀಣ ಪ್ರದೇಶಗಳಲ್ಲಿ ಸಂತೆಗಳನ್ನು ಮತ್ತು ಕಣಗಳನ್ನು ಅಭಿವೃದ್ಧಿಪಡಿಸಲು ಸಹ ಉದ್ದೇಶಿಸಲಾಗಿದೆ ರಾಜ್ಯದಲ್ಲಿ ಎರಡು ಹೊಸ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳನ್ನು ತೆರೆಯುವುದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿ ನೀಡಿದೆ

11 ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಬಲಗೊಳಿಸಬೇಕಾದ ಅಗತ್ಯವನ್ನು ನನ್ನ ಸರ್ಕಾರವು ಮನಗಂಡಿದೆ ಪ್ರಜಾಪ್ರಭುತ್ವ ವಿಕೇಂದ್ರೀಕರಣ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದಕ್ಕೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಚ್ಚಿನ ಆಡಳಿತ, ಯೋಜನೆ ಮತ್ತು ಆರ್ಥಿಕ ಅಧಿಕಾರಗಳನ್ನು ನೀಡುವುದಕ್ಕಾಗಿ ಕಾರ್ಯತಂದವನ್ನು ರಚಿಸಲಾಗಿದ ಗ್ರಾಮಸಭೆಯನ್ನು ಬಲಪಡಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಇದು ಹೆಚ್ಚಿನ ಪಾತ್ರ ವಹಿಸುವಂತೆ ಮಾಡಲು ಇದಕ್ಕೆ ಅಧಿಕಾರ ನೀಡಲಾಗುವುದು ಪಂಚಾಯತ್ ರಾಜ್ ವ್ಯವಸ್ಥೆಯ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ತರಲಾಗುವುದು ಚರ್ಚೆಗೆ ನಿರ್ದಿಷ್ಟ ಕಾರ್ಯಸೂಚಿಯನ್ನು ರೂಪಿಸಿಕೊಂಡು, ವರ್ಷದಲ್ಲಿ ನಾಲ್ಕು ಬಾರಿ ಗ್ರಾಮ ಸಭೆಗಳನ್ನು ಕರೆದು ಚರ್ಚಿಸಬೇಕೆಂಬುದನ್ನು ಕಡ್ಡಾಯಗೊಳಿಸಲಾಗಿದೆ ಹನ್ನೆರಡು ಜಿಲ್ಲೆಗಳಲ್ಲಿ ಜಿಲ್ಲಾ ಯೋಜನಾ ಸಮಿತಿಗಳನ್ನು ಸಹ ರಚಿಸಲಾಗಿದ ಇದರಿಂದ ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಗ್ರಾಮ ಪಂಚಾಯತಿಗಳು, ಪುರಸಭೆಗಳು, ನಗರಪಾಲಿಕೆಗಳು ಮುಂತಾದವು ಸಿದ್ಧಪಡಿಸಿರುವ ಯೋಜನೆಗಳ ಆಧಾರದ ಮೇಲೆ ಒಟ್ಟಾರೆ ಜಿಲ್ಲೆಗೆ ಅನ್ವಯಿಸುವಂತ ಕರಡು ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಬಹುದಾಗಿದೆ ಇದೇ ರೀತಿಯ ಸಮಿತಿಗಳನ್ನು ಇತರ ಜಿಲ್ಲೆಗಳಲ್ಲೂ ರಚಿಸುವ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು

12 ಕುಡಿಯುವ ನೀರಿನ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತಿದೆ ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲಾ ಮೂಲಗಳಿಂದ ಪಡೆದ ನೀರಿನ ಮಾದರಿಗಳ ಪರೀಕ್ಷೆ ಮತ್ತು ಪರೀಕ್ಷೆಯನ್ನು ಪೂರ್ಣಗೊಳಿಸಲಾಗಿದ ನೀರಿನಲ್ಲಿ ಫ್ಲೋರೈಡ್, ಕಬ್ಬಿಣದ ಅಂಶ ಹೆಚ್ಚಿಗ ಇರುವ ಸಮಸ್ಯೆಗಳನ್ನು ಎದುರಿಸುತ್ತಿರುವ 20 929 ವಸತಿ ಪ್ರದೇಶಗಳನ್ನು ಗುರುತಿಸಲಾಗಿದ್ದು, ಆ ವಸತಿ ಪ್ರದೇಶಗಳಿಗ ಸುರಕ್ಷಿತವಾದ ಕುಡಿಯುವ ನೀರನ್ನು ಹಂತ ಹಂತವಾಗಿ ಒದಗಿಸುವುದಕ್ಕೆ ಯೋಜನಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ

13 ವಿಶ್ವ ಬ್ಯಾಂಕ್ ನರವಿನೊಂದಿಗೆ ಆರು ವರ್ಷಗಳ ಅವಧಿಯಲ್ಲಿ ಒಟ್ಟು 1000 ಕೋಟಿ ರೂಪಾಯಿ ವೆಚ್ಚದಲ್ಲಿ ಉತ್ತರ ಕರ್ನಾಟಕದ 11 ಜಿಲ್ಲೆಗಳಲ್ಲಿ ಜಾರಿಗೊಳಿಸುವ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ-IIನ್ನು ಅಂತಿಮಗೊಳಿಸಲಾಗಿದೆ ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಮತ್ತು ಅದನ್ನು ನಿರ್ವಹಿಸಿಕೊಂಡು ಬರುವಲ್ಲಿ ಇನ್ನು ಮುಂದೆ ಗ್ರಾಮ ಪಂಚಾಯತಿಗಳನ್ನು ಸಹ ತೊಡಗಿಸಿಕೊಳ್ಳಲಾಗುವುದು ಡ್ಯಾನಿಡಾ ನೆರವಿನ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಕಾರ್ಯಕ್ರಮದಡಿ 680 ಯೋಜನೆಗಳು ಈಗಾಗಲೇ ಕಾರ್ಯಾರಂಭ ಮಾಡಿದ್ದು, ಉಳಿದವುಗಳನ್ನು ಮಾರ್ಚ್ 2002ರ ವೇಳೆಗೆ ಪೂರ್ಣಗೊಳಿಸಲಾಗುವುದು

14 ಸಂಪೂರ್ಣ ಗ್ರಾಮೀಣ ರೋಜ್ಗಾರ್ ಯೋಜನೆಯು (ಎಸ್ ಜಿ ಆರ್ ವೈ ಯು) ಒಂದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಇದನ್ನು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಕೂಲಿಯನ್ನು ನೀಡುವ ಉದ್ಯೋಗ, ಆಹಾರ ಮತ್ತು ಭದ್ರತೆಯನ್ನು ಒದಗಿಸುವ ದೃಷ್ಟಿಯಿಂದ ಈ ವರ್ಷ ಪ್ರಾರಂಭಿಸಲಾಗಿದೆ ಇದರಿಂದಾಗಿ ದೀರ್ಘಕಾಲ ಬಾಳಿಕೆ ಬರುವ ಸಮುದಾಯ ಸ್ವತ್ತುಗಳನ್ನು, ಸಾಮಾಜಿಕ ಮತ್ತು ಆರ್ಥಿಕ ಸ್ವತ್ತುಗಳನ್ನು ಸೃಜಿಸಿದಂತಾಗುವುದು ಈ ಸಂಪೂರ್ಣ ಗ್ರಾಮೀಣ ರೋಜ್ಗಾರ್ ಯೋಜನೆಯನ್ನು ಅನುಷ್ಠಾನಗೊಳಿಸುವುದರಿಂದ ರಾಜ್ಯವು ಈ ವರ್ಷ ಕೇಂದ್ರ ಸರ್ಕಾರದಿಂದ 43 ಕೋಟಿ ರೂಪಾಯಿ ಹೆಚ್ಚುವರಿ ಅನುದಾನವನ್ನು ಮತ್ತು 2 ಲಕ್ಷ ಟನ್ ಆಹಾರ ಧಾನ್ಯವನ್ನು ಪಡೆಯುವುದು

15 ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಅಡಿಯಲ್ಲಿ ಮಾರ್ಚ್ 2003ರ ಕೊನೆಯ ವೇಳೆಗೆ 1000ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಎಲ್ಲ ಗ್ರಾಮಗಳಿಗೆ ಮತ್ತು 2007ನೇ ವರ್ಷದ ಕೊನೆಯ ವೇಳೆಗೆ 500 ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮಗಳಿಗೆ ಸರ್ವ ಋತು ರಸ್ತೆ ಸಂಪರ್ಕ ಕಲ್ಪಿಸಲಾಗುವುದು

16 ನನ್ನ ಸರ್ಕಾರವು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸರಳಗೊಳಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಬಡತನ ರೇಖೆಗಿಂತ ಕೆಳಮೆ ಇರುವ ಕುಟುಂಬಗಳಿಗೆ

ಈ ಸಾರ್ವಜನಿಕ ಎತರಣಾ ವ್ಯವಸ್ಥೆಯು ಸೌಲಭ್ಯ ದೊರೆಯುತ್ತಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ದೃಷ್ಟಿಯಿಂದ ಮನೆ ಮನೆಯ ಸಮೀಕ್ಷೆ ನಡಸುವ ಒಂದು ಹೊಸ ಕಾರ್ಯ ಆರಂಬಿಸಿದ ಪರಿಪೂರ್ಣ ಅಂಕಿಅಂಶ ಮಾಹಿತಿಯನ್ನು ಸಿದ್ದವಡಿಸಿದ ಮೇಲೆ ವಡಿತರ ಚೀಟಿಗಳನ್ನು ಗಣಕೀಕರಣಗೊಳಿಸಲಾಗುವುದು

17 ನನ್ನ ಸರ್ಕಾರವು ಬಡತನ ರೇಂಖೆಗಿಂತ ಕೆಳಗೆ ಇರುವ ಎಲ್ಲ ವಸತಿಹೀನ ಜನರಿಗೆ ಐದು ವರ್ಷಗಳ ಅವಧಿಯೊಳಗೆ ನೆರವನ್ನು ಒದಗಿಸಲು ಕಂಕಣಬದ್ಧವಾಗಿದೆ ಅದರಂತೆ 2000ನೇ ಏಪ್ರಿಲ್‌ನಲ್ಲಿ ಸ್ಥಾಪಿಸಿದ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶದ ವಸತಿಹೀನ ಒಡವರಿಗಾಗಿ 11 ಲಕ್ಷ ಮನೆಗಳ ನಿರ್ಮಾಣದ ಒಂದು ಬೃಹತ್ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ಈ ನಿಗಮವು ಸ್ಥಾಪನೆಯಾದಂದಿನಿಂದ 2001ರ ಕೊನೆಯ ವೇಳೆಗ ಸುಮಾರು 2,20 000 ಮನೆಗಳನ್ನು ನಿರ್ಮಿಸಿರುವುದು ಹೆಚ್ಚು ಸಮಾಧಾನ ತರುವ ವಿಷಯವಾಗಿದೆ ಇಷ್ಟರಲ್ಲಿಯೇ ನಿಗಮವು ಪ್ರತಿ ವರ್ಷ ಒರಡು ಲಕ್ಷ ಮನೆಗಳನ್ನು ನಿರ್ಮಾಣ ಮಾಡುವ ಗುರಿ ತಲುವುತ್ತದೆಂಬ ಭರವಸೆ ನನ್ನ ಸರ್ಕಾರಕ್ಕಿದೆ ಸಾರ್ವಜನಿಕ ವಸತಿ ಕ್ಷೇತ್ರದಲ್ಲಿ ರಾಜ್ಯದ ಈ ಸಾಧನೆ ನಿಜಕ್ಕೂ ಒಂದು ದಾಖಲೆ

18 ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಸಾರ್ವಜನಿಕ ವಸತಿ ಕ್ಷೇತ್ರದಲ್ಲಿ ಕಡಿಮೆ ವೆಚ್ಚದ ಮನೆಗಳನ್ನು ನಿರ್ಮಿಸಿಕೊಡುವ ತಂತ್ರಜ್ಞಾನಗಳಿಗೂ ಸಹ ಉತ್ತೇಜನ ನೀಡುತ್ತಿದೆ ಫಲಾನುಭವಿ ಕುಟುಂಬಗಳು ಸ್ವತಃ ತಾವೇ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ನಿಗಮ ಪ್ರೋತ್ಸಾಹ ನೀಡುತ್ತದ ಇದರಿಂದಾಗಿ ಆಶ್ರಯ ಮತ್ತು ಡಾ ಅಂಬೇಡ್ಕರ್ ವಸತಿ ಕಾರ್ಯಕ್ರಮ ಮುಂತಾದ ಯೋಜನೆಗಳ ಅಡಿಯಲ್ಲಿ ಉತ್ತಮ ಗುಣಮಟ್ಟದ ಮನೆಗಳನ್ನು ಶೀಘ್ರವಾಗಿ ನಿರ್ಮಿಸಲು ಸಾಧ್ಯವಾಗಿದೆ ಗೃಹ ನಿರ್ಮಾಣದಲ್ಲಿ ಮತ್ತು ಗೃಹ ನಿರ್ಮಾಣದ ನಾಲದ ಮರು ಪಾವತಿಗಾಗಿ ಹಣ ಉಳಿತಾಯ ಮಾಡುವಂತೆ ಫಲಾನುಭವಿಗಳ ಮನವೊಲಿಸುವುದರಲ್ಲಿ ಗ್ರಾಮ ಪಂಚಾಯತಿಗಳು ತೊಡಗುವಂತೆ ಮಾಡಿರುವ ಹೊಸ ಪ್ರಯೋಗದಿಂದ ಉತ್ತಮ ಫಲಿತಾಂಶ ದೊರೆತಿದೆ ನನ್ನ ಸರ್ಕಾರವು ಈ ವ್ಯವಸ್ಥೆಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸುವ ಬಗ್ಗೆ ಪರಿಶೀಲಿಸುತ್ತಿದೆ

19 ನನ್ನ ಸರ್ಕಾರವು ನಗರದ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಬಡವರ ಸ್ಥಿತಿಗತಿಗಳನ್ನು ಸುಧಾರಿಸಲು ಹೆಚ್ಚಿನ ಆದ್ಯತೆ ನೀಡುತ್ತದೆ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿಯು ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ನಿರ್ಮಲ ಜ್ಯೋತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕಾರ್ಯ ಕೈಗೊಂಡಿದೆ ಈ ಕಾರ್ಯಕ್ರಮದ ಅಡಿಯಲ್ಲಿ ಒಳ ರಸ್ತೆಗಳು ಒಳ ಚರಂಡಿ ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುವುದು ಪ್ರಸಕ್ತ ಹಣಕಾಸು ವರ್ಷದಲ್ಲೇ ಈ

ಯೋಜನೆಯನ್ನು ತರಂಬಸಲು ರಾಜ್ಯದ ವಿವಿಧ ಪಟ್ಟಣ ಮತ್ತು ನಗರಗಳಲ್ಲಿ 279 ಕೊಳಚೆ ಪ್ರದೇಶಗಳನ್ನು ಆಯ್ಕೆ ಮಾಡಲಾಗಿದೆ

20 ಕಳೆದ ವರ್ಷ ಮಂಜೂರಾಗಿದ್ದ ''ನೂರು ಗೃಹ ನಿರ್ಮಾಣ ಯೋಜನೆಗಳನ್ನು'' ಕರ್ನಾಟಕ ಗೃಹ ಮಂಡಲಿಯು ಕಾರ್ಯಗತಗೊಳಿಸಲು ಮುಂದಾಗಿದ್ದು ಈ ಯೋಜನೆಗಳ ಅಡಿಯಲ್ಲಿ ಎರಡು ವರ್ಷಗಳ ಅವಧಿಯೊಳಗೆ ಮಧ್ಯಮ ಮತ್ತು ಕಡಿಮೆ ಆದಾಯ ಕುಟುಂಬಗಳಿಗೆ ಸುಮಾರು 13,500 ಮನೆಗಳನ್ನು ನಿರ್ಮಿಸಲಾಗುವುದು ಹಾಗು 15,000 ನಿವೇಶನಗಳನ್ನು ಹಂಚಲಾಗುವುದು

21 ಅಭಿವೃದ್ಧಿಯು ಶಿಕ್ಷಣದ ಮೂಲಕ ಮಾತ್ರ ಸಾಧ್ಯ ಎಂದು ನನ್ನ ಸರ್ಕಾರ ಮನಗಂಡಿದೆ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಹೆಣ್ಣು ಮಕ್ಕಳಿಗೆ ಹನ್ನೆರಡನೇ ತರಗತಿಯವರೆಗೆ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ ಉಚಿತವಾಗಿ ಪಠ್ಯ ಪುಸ್ತಕಗಳನ್ನು ಒದಗಿಸುವ ಯೋಜನೆಯನ್ನು ಸರ್ಕಾರಿ ಶಾಲೆಗಳಲ್ಲಿ 7ನೇ ತರಗತಿಯವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ವಿಸ್ತರಿಸಲಾಗಿದೆ ರಾಷ್ಟ್ರೀಯ ಮಾದರಿಯಂತೆ ಐದು ವರ್ಷಗಳ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಜಾರಿಗೆ ತರಲು 2001-02ನೇ ಸಾಲಿನಿಂದ 4ನೇ ತರಗತಿಯನ್ನು ಪ್ರಾಥಮಿಕ ಶಾಲೆಗಳಿಗೆ ಸೇರಿಸಲಾಗಿದೆ ಶಾಲೆ ಬಿಟ್ಟ 81,000 ಮಕ್ಕಳನ್ನು ಚಿನ್ನರ ಅಂಗಳ ಕಾರ್ಯಕ್ರಮದಡಿಯಲ್ಲಿ ಶಾಲೆಗಳಿಗೆ ಪುನಃ ಸೇರಿಸಲಾಗಿದೆ ಈ ಕಾರ್ಯಕ್ರಮದ ಎರಡನೇ ಹಂತವನ್ನು ಶೈಕ್ಷಣಿಕವಾಗಿ ಹಿಂದುಳಿದ ಏಳು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು 25,000 ಮಕ್ಕಳನ್ನು ಮತ್ತೆ ಶಾಲೆಗೆ ಸೇರಿಸಲಾಗುವುದು

22 ಈಶಾನ್ಯ ಕರ್ನಾಟಕದ ಶೈಕ್ಷಣಿಕವಾಗಿ ಹಿಂದುಳಿದಿರುವ ಐದು ಜಿಲ್ಲೆಗಳಲ್ಲಿ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲು ಈ ಪ್ರದೇಶದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳ ಮೇಲ್ವಿಚಾರಣೆ ಮಾಡುವುದಕ್ಕಾಗಿ ಒಂದು ಪ್ರತ್ಯೇಕ ನಿರ್ದೇಶನಾಲಯವನ್ನು ರಚಿಸಲಾಗಿದೆ ಮಕ್ಕಳ ಸಮೂಹ ವಿಮೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ ಇದರಡಿಯಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗಿನ ಎಲ್ಲಾ ಶಾಲಾ ಮಕ್ಕಳಿಗೆ ಮತ್ತು 3ಲಕ್ಷ ಅಧ್ಯಾಪಕರಿಗೆ ವಿಮೆ ಸೌಲಭ್ಯ ಒದಗಿಸಲಾಗಿದೆ

23 ಶಿಕ್ಷಕರಂತೆ ಶಾಲೆ ಸೇವೆಯಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವ್ಯಾವಕ ತರಬೇತಿ ನೀಡಲು ನನ್ನ ಸರ್ಕಾರವು ಚೈತನ್ಯ ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದೆ ಇದರಡಿಯಲ್ಲಿ 1,25,000 ಶಿಕ್ಷಕರು ಈಗಾಗಲೇ ತರಬೇತಿ ಪಡೆದಿದ್ದಾರೆ 15,000 ಪ್ರಾಥಮಿಕ ಶಾಲಾ ಶಿಕ್ಷಕರನ್ನು ಮತ್ತು 7,000 ಪ್ರೌಢಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು ಈ ಸಂಬಂಧ ಸದ್ಯದಲ್ಲೇ

ಆದೇಶಗಳನ್ನು ಹೊರಡಿಸಲಾಗುವುದು

24 ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿರುವ ಏಳು ಈಶಾನ್ಯ ಜಿಲ್ಲೆಗಳಲ್ಲಿ ಬಿಸಿ ಊಟ ಒದಗಿಸಲು ಮಧ್ಯಾಹ್ನ ಊಟದ ಯೋಜನೆಯನ್ನು ಪ್ರಾರಂಬಿಸಲಾಗಿದೆ ಈ ಯೋಜನೆಯು ಈ ಜಿಲ್ಲೆಗಳಲ್ಲಿನ 8000ಕ್ಕಿಂತ ಹೆಚ್ಚು ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ 17 ಲಕ್ಷ ಮಕ್ಕಳಿಗ ಈ ಸೌಲಭ್ಯ ಒದಗಿಸುತ್ತದೆ

25 ಕನ್ನಡದ ಬೆಳವಣಿಗೆ ಮತ್ತು ಅಬಿವೃದ್ಧಿಗೆ ಪ್ರೋತ್ಸಾಹ ನೀಡಲು 1 ರಿಂದ 10ನೇ ತರಗತಿಯವರಗೆ ಕನ್ನಡ ಮಾಧ್ಯಮದಲ್ಲಿ ಓದಿರುವ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣದಲ್ಲಿ ಶೇಕಡಾ 5ರಷ್ಟು ಮೀಸಲಾತಿ ಕಲ್ಪಿಸಲಾಗಿದೆ ಡಿಪ್ಲೋಮಾ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಎರಡನೇ/ಮೂರನೇ ವರ್ಷದ ಬಿ ಇ/ಬಿ ಟೆಕ್ ವದವಿ ಕೋರ್ಸ್‌ಗಳಿಗೆ ನೇರವಾಗಿ ಸೇರುವ ಅವಕಾಶವನ್ನು ಕಲ್ಪಿಸುವ ಸಲುವಾಗಿ ಒಂದು ಯೋಜನೆಯನ್ನು ಆರಂಭಿಸಲಾಗಿದೆ

26 ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ವನ್ನು ಜಾರಿಗೆ ತರುವ ಮೂಲಕ ವಿಶ್ವವಿದ್ಯಾನಿಲಯಗಳ ಕಾರ್ಯನಿರ್ವಹಣೆಯನ್ನು ಸುಗಮಗೊಳಿಸಲಾಗಿದೆ ಅನಗತ್ಯ ವ್ಯಾಧಿಕಾರವಾದ ನೆನೆಟನ್ನು ರದ್ದುಗೊಳಿಸಲಾಗಿದೆ ಕರ್ನಾಟಕದ ವಿಶ್ವವಿದ್ಯಾನಿಲಯಗಳು ವಿದೇಶೀ ವಿಶ್ವವಿದ್ಯಾನಿಲಯಗಳೊಂದಿಗೆ ಪರಸ್ಪರ ಸಂಪರ್ಕ ಹೊಂದುವ ಅವಕಾಶವನ್ನು ಈ ಅಧಿನಿಯಮ ಕಲ್ಪಿಸುತ್ತದೆ ಮತ್ತು ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲಿ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯನ್ನು ರಚಿಸಲಾಗಿದೆ

27 ಮಾಹಿತಿ ತಂತ್ರಜ್ಞಾನ ಆಧಾರಿತ ಕೋರ್ಸುಗಳಿಗೆ ಸೇರಲು ಸಹಾಜದ ದುರ್ಬಲ ವರ್ಗಗಳ ವಿದ್ಯಾರ್ಥಿಗಳನ್ನು ತಯಾರು ಮಾಡುವ ಸಲುವಾಗಿ ಸರ್ಕಾರಿ ಕಾಲೇಜುಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಹಂತ ಹಂತವಾಗಿ ಪ್ರಾರಂಭಸಲಾಗುತ್ತಿದೆ ಹಾಗೂ 13 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಾಹಿತಿ ತಂತ್ರಜ್ಞಾನ ಆಧಾರಿತ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ

28 ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡದ ಒಳಕೆಯನ್ನು ಜನಪ್ರಿಯಗೊಳಿಸುವ ಮತ್ತು ಕನ್ನಡ ಭಾಷೆಯಲ್ಲಿ ಪ್ರಾವೀಣ್ಯತೆ ಸಾದಿಸಿದವರಿಗೆ ಪ್ರಶಸ್ತಿ ನೀಡುವ ಪ್ರಯತ್ನಗಳನ್ನು ಮುಂದುವರೆಸುತ್ತಿದ ಕನ್ನಡ ಮಾಧ್ಯಮದಲ್ಲಿ ಓದಿ ಎಸ್ ಎಸ್ ಎಲ್ ಸಿ ಮತ್ತು ಪಿ ಯು ಸಿ ಯಲ್ಲಿ ರಾಜ್ಯ ಮತ್ತು ವಿಭಾಗ ಮಟ್ಟದಲ್ಲಿ ಅತ್ಯಧಿಕ ಅಂಕಗಳನ್ನು ಪಡೆಯುವ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡುವ ಯೋಜನೆಯನ್ನು ಆರಂಬಿಸಲಾಗಿದೆ

29 ಸುಧಾರಿತ ವೈದ್ಯಕೀಯ ಸೌಲಭ್ಯಗಳನ್ನು ವಿಶೇಷವಾಗಿ ಗ್ರಾಮೀಣ ಮತ್ತು ಅತಿ ದೂರದ ಪ್ರದೇಶಗಳಲ್ಲಿ ಒದಗಿಸುವುದು ನನ್ನ ಸರ್ಕಾರದ ಮುಖ್ಯ ಗುರಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯಾಧಿಕಾರಿಗಳ ಸೇವೆ ದೊರೆಯುವಂತೆ ಮಾಡಲು ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯರಿಗೆ ಮತ್ತು ತಜ್ಞರಿಗೆ ಸಂದಾಯ ಮಾಡುವ ಸಂಭಾವನೆಯನ್ನು ಹೆಚ್ಚಿಸಲಾಗಿದೆ ಮತ್ತು ಅವರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುವಂತೆ ಮಾಡಲು ಪ್ರೋತ್ಸಾಹಕಗಳನ್ನು ನೀಡಲು ಉದ್ದೇಶಿಸಲಾಗಿದೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಯೋಗ ಶಾಲಾ ತಂತ್ರಜ್ಞರನ್ನು ನೇಮಕ ಮಾಡಲಾಗಿದೆ ಇದರಿಂದ ಪ್ರಯೋಗಶಾಲಾ ವರೀಕ್ಷೆಗಳ ಅನುಕೂಲ ಸಾಮಾನ್ಯರಿಗೆ ನಿಲುಕುವಂತಾಗುತ್ತದೆ

30 ಪ್ರಸಕ್ತ ಸಾಲಿನಲ್ಲಿ ಸರ್ಕಾರವು ಗುಲ್ಬರ್ಗಾ ವಿಭಾಗದ ಯಾದಗಿರಿಯಲ್ಲಿ ಮತ್ತು ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ಎರಡು ಹೆಚ್ಚುವರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕೇಂದ್ರಗಳನ್ನು ಮಂಜೂರು ಮಾಡಿದ ಈ ದೊಡ್ಡ ಜಿಲ್ಲೆಗಳಲ್ಲಿ ಇಲಾಖಾ ಚಟುವಟಿಕೆಗಳ ಮತ್ತು ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ವರಿವೀಕ್ಷಣೆ ಕಾರ್ಯವನ್ನು ಸುಧಾರಣೆ ಮಾಡುವುದು ಇದರ ಉದ್ದೇಶವಾಗಿದೆ ರೋಗ ಪತ್ತೆ ಹಚ್ಚುವ ವಿಶೇಷ ವಿಧಾನಗಳನ್ನು ಕೈಗೊಳ್ಳಲು ಬೇಕಾದ ಮೂಲ ಸೌಲಭ್ಯಗಳನ್ನು ಉತ್ತಮವಡಿಸುವ ನಲುವಾಗಿ ಬೀದರ್, ಮಂಡ್ಯ ಮತ್ತು ತುಮಕೂರುಗಳಲ್ಲಿ ರೋಗ ಪತ್ತೆ ಹಚ್ಚುವ ಮೂರು ಪ್ರಾದೇಶಿಕ ಪ್ರಯೋಗಾಲಯಗಳನ್ನು ಸರ್ಕಾರ ಮಂಜೂರು ಮಾಡಿದೆ

31 ರಾಜ್ಯದಲ್ಲಿ 1994ರಿಂದಲೂ ಅನುಷ್ಠಾನಗೊಳಿಸಲಾಗುತ್ತಿರುವ ವಿಶ್ವಬ್ಯಾಂಕ್ ನೆರವಿನ ಯೋಜನೆಯಾದ ಭಾರತ ಜನಸಂಖ್ಯಾ ಯೋಜನೆ IX ಈಗ ಪೂರ್ಣಗೊಂಡಿದೆ ದಂಪತಿಗಳ ಸುರಕ್ಷಾ ಪ್ರಮಾಣವು ಶೇಕಡಾ 4ರಿಂದ ಶೇಕಡಾ 60ಕ್ಕೆ ಹೆಚ್ಚಾಗಿದೆ ಹೆರಿಗೆಗಾಗಿ ಆಸ್ಪತ್ರೆಗಳಿಗೆ ಒರುವವರ ಪ್ರಮಾಣ ಹೆಚ್ಚಾಗಿದೆ ಮತ್ತು ಈಗ ಕರ್ನಾಟಕದಲ್ಲಿ ಶೇಕಡಾ 59ರಷ್ಟು ಹೆರಿಗೆಗಳು ಆಸ್ಪತ್ರೆಗಳಲ್ಲೇ ಆಗುತ್ತಿವೆ ಸೋಂಕು ನಿರೋಧಕ ಪ್ರಮಾಣ ಶೇಕಡಾ 92ಕ್ಕೆ ಹೆಚ್ಚಿದೆ ವಿಶ್ವ ಬ್ಯಾಂಕ್ ಮತ್ತು ಕರ್ನಾಟಕ ಕುಟುಂಬ ಕಲ್ಯಾಣ ಯೋಜನೆಗಳ ಮೇರೆಗೆ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವ ಮತ್ತು ಪುನಸ್ಸಜ್ಜೀಕರಣಗೊಳಿಸುವ ಕಾರ್ಯವನ್ನು ಮುಂದುವರೆಸಲಾಗಿದೆ ರಾಯಚೂರಿನಲ್ಲಿ ಒಪೆಕ್ ನೆರವಿನ ರಾಜೀವ್ ಗಾಂಧಿ ಸ್ಮಾರಕ ಆಸ್ಪತ್ರೆಯನ್ನು 33 ಕೋಟಿ ರೂಪಾಯಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ ಈ ಆಸ್ಪತ್ರೆಯನ್ನು 10 ವರ್ಷ ಜಂಟಿಯಾಗಿ ನಡೆಸಲು ಮೆ ಅಪೋಲೋ ಹಾಸ್ಪಿಟಲ್ ಎಂಟರ್‌ಪ್ರೈಸಸ್ ಸಂಸ್ಥೆಯೊಂದಿಗೆ ನೇವಾ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ

32 ವೈದ್ಯಕೀಯ ಶಿಕ್ಷಣದ ಮತ್ತು ಬಹಿರ್ಗಾ ಸೇವೆಗಳ ಗುಣಮಟ್ಟವನ್ನು

ಉತ್ತಮವಡಿಸಲು ಹಚ್ಚಿನ ಗಮನ ನೀಡಲಾಗಿದ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳ ಖರೀದಿ ವ್ರಯೋಗ ಶಾಲೆ ಸೌಲಭ್ಯಗಳ ನುಧಾರಣೆ, ಟೆಲಿ ಮೆಡಿಸಿನ್ ಕಾರ್ಯಕ್ರಮದ ವ್ರಾರಂಭ ಇವು ಅಂಥ ಕೆಲವು ಸಾಧನೆಗಳು 43 ' ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬನ್ನೇರುಘಟ್ಟ ರಸ್ತೆಯಲ್ಲಿ ನಿರ್ಮಿಸಲಾಗಿರುವ ಹೊಸ ಕಟ್ಟಡದಲ್ಲಿ ಜಯದೇವ ಹೃದ್ರೋಗ ಸಂಸ್ಥೆ ಕಾರ್ಯಾರಂಭ ಮಾಡಿದೆ 25 ಕೋಟಿ ರೂಪಾಯಿ ಬೆಲೆಯ ಇನ್ನೊಂದು ನವೀನಾತಿ ನವೀನ ಉಪಕರಣವನ್ನು ಖರೀದಿಸಲಾಗಿದೆ 2002-03 ನೇ ವರ್ಷದಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೂತ್ರಪಿಂಡ-ಮೂತ್ರಎಜ್ಞಾನ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹಾಗೂ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಚರ್ಮಕಸಿ ಮತ್ತು ವ್ಯನರ್ ರಚನೆ ಶಸ್ತ್ರ ಚಿಕಿತ್ಸಾ ಸೌಲಭ್ಯವುಳ್ಳ ಒಂದು ಪರಿಪೂರ್ಣ ಉನ್ನತ ತಂತ್ರಜ್ಞಾನದ ಸುಟ್ಟಗಾಯಗಳ ಕೇಂದ್ರವನ್ನು ಮತ್ತು ಒಂದು ಕೇಂದ್ರೀಕೃತ ಜೀವದ್ರವ ಬ್ಯಾಂಕನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ

13 ನನ್ನ ಸರ್ಕಾರವು ಸಮಾಜದ ದುರ್ಬಲ ವರ್ಗಗಳವರಿಗೆ ಶಿಕ್ಷಣ, ಉದ್ಯೋಗ ಒದಗಿಸುವ, ಅವರನ್ನು ಸಬಲರನ್ನಾಗಿಸುವ ಮತ್ತು ಉದ್ಯಮಶೀಲರನ್ನಾಗಿಸುವ ನೀತಿಗೆ ಬದ್ಧವಾಗಿದೆ ಮಕ್ಕಳು ಶಾಲೆಯನ್ನು ಮಧ್ಯದಲ್ಲೇ ಬಿಡುವುದನ್ನು ತಪ್ಪಿಸಲು ಮಾಡಿದ ವ್ರಯತ್ನಗಳಿಗೆ ಉತ್ತಮ ಪ್ರತಿಕ್ರಿಯೆ ಬಂದದ್ದರಿಂದ ಪ್ರೌಢಶಾಲೆಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರಿಗೆ ನೀಡುತ್ತಿರುವ ಪ್ರೋತ್ಸಾಹಕ ವಿದ್ಯಾರ್ಥಿ ವೇತನ ಯೋಜನೆಯನ್ನು ವ್ರಾಥಮಿಕ ಶಾಲಾ ವಿದ್ಯಾರ್ಥಿನಿಯರಿಗೂ ವಿಸ್ತರಿಸಲಾಗುವುದು ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ವ್ರವೇಶ ಬಯಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗ ಹತ್ತು ಲಕ್ಷ ರೂಪಾಯಿವರೆಗೆ ಹಣಕಾಸು ನೆರವು ಒದಗಿಸುವ ಒಂದು ಯೋಜನೆಯನ್ನು ಜಾರಿಗೆ ತರಲಾಗಿದೆ ಈ ವರ್ಷ 5,000 ನಿರುದ್ಯೋಗಿ ವದವೀಧರರಿಗೆ ಕಂಪ್ಯೂಟರ್ ತರಬೇತಿ ನೀಡಲಾಗುವುದು

34 'ಗಂಗಾ ಕಲ್ಯಾಣ' ಯೋಜನೆಯ ಅಡಿಯಲ್ಲಿ ಈ ವರ್ಷ 5,000 ಕೊಳವೆ ಬಾವಿಗಳನ್ನು ಒದಗಿಸಲಾಗಿದೆ ಈ ಕೊಳವೆ ಬಾವಿಗಳಿಗ ವಿದ್ಯುತ್ ಸಂಪರ್ಕ ನೀಡುವುದಕ್ಕೆ ಮೊದಲ ಆದ್ಯತ ನೀಡಲಾಗುವುದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಆಶ್ರಯ ಯೋಜನೆ ಅಡಿಯಲ್ಲಿ 46,000 ಮನೆಗಳನ್ನು ಮತ್ತು ಅಂಬೇಡ್ಕರ್ ವಸತಿ ಯೋಜನೆ ಅಡಿಯಲ್ಲಿ 25 000 ಮನೆಗಳನ್ನು ಒದಗಿಸಲಾಗುತ್ತಿದೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅಡಿಯಲ್ಲಿ ವ್ರತಿ ಜಿಲ್ಲೆಯ ಎರಡು ಗ್ರಾಮಗಳಲ್ಲಿ ಹತ್ತು ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ, ನಾಗರಿಕ ಸೌಲಭ್ಯಗಳನ್ನು ಒದಗಿಸುವ ಕಾರ್ಯ ಕೈಗೊಳ್ಳಲು ಉದ್ದೇಶಿಸಲಾಗಿದೆ

35 ನನ್ನ ಸರ್ಕಾರವು ಗಿರಿಜನರ ಜೀವನ ಮಟ್ಟ ಸುಧಾರಿಸಲು ನಿಶ್ಚಯಿಸಿದೆ ಮುಖ್ಯಮಂತ್ರಿಯವರು ಮತ್ತು ಹಿರಿಯ ಮಂತ್ರಿಗಳು ಗಿರಿಜನ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದಾರೆ ಮತ್ತು ಹಲವಾರು ನಿರ್ಧಾರಗಳನ್ನು ತೆಗೆದುಕೊಂಡು ಅನುಷ್ಠಾನಗೊಳಿಸಲಾಗಿದೆ ಗಿರಿಜನ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲು ಮೊದಲ ಆದ್ಯತೆ ನೀಡಲಾಗುತ್ತಿದೆ ಗಿರಿಜನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ನಿರ್ಮಾಣ ಮಾಡಲು ಹಣ ಒದಗಿಸಲಾಗಿದೆ ಗಿರಿಜನರಿಗೆ ಸಂಚಾರಿ ಆರೋಗ್ಯ ಚಿಕಿತ್ಸಾಲಯ ಸೌಲಭ್ಯವನ್ನು ಹಂತಹಂತವಾಗಿ ಒದಗಿಸಲಾಗುತ್ತಿದೆ ಲಂಬಾಣಿ ತಾಂಡಾಗಳು, ಸಣ್ಣ ಹಳ್ಳಿಗಳು, ಗೊಲ್ಲರಹಟ್ಟಿ ಮುಂತಾದವುಗಳ ಜನಸಂಖ್ಯೆ 500ಕ್ಕಿಂತ ಹೆಚ್ಚಿದ್ದರೆ ಅಥವಾ ಕುಟುಂಬಗಳ ಸಂಖ್ಯೆ 100ಕ್ಕಿಂತ ಹೆಚ್ಚಿದ್ದರೆ ಅವುಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸುವ ಪ್ರಕ್ರಿಯೆಯನ್ನು ತೀವ್ರಗೊಳಿಸಲಾಗುವುದು

36 ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ಅತ್ಯಂತ ಜಾಗರೂಕತೆಯಿಂದ ಕಾಪಾಡಲಾಗುತ್ತಿದೆ ಅವರ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಕರ್ನಾಟಕ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯ ನಿರ್ಮಾಣ ಸಂಘವು 40 ಕೋಟಿ ರೂಪಾಯಿ ವೆಚ್ಚದಲ್ಲಿ 100 ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳುತ್ತಿದೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಅನುಕೂಲಕ್ಕಾಗಿ 70 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ 35 ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ 'ಶಾದಿ ಮಹಲ್' ಯೋಜನೆಯಡಿ ಅಲ್ಪಸಂಖ್ಯಾತರಿಗಾಗಿ ವಿವಿಧೋದ್ದೇಶದ ಸಮುದಾಯ ಭವನಗಳನ್ನು ಮಂಜೂರು ಮಾಡಲಾಗುತ್ತಿದೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಸ್ವಯಂ ಉದ್ಯೋಗಕ್ಕಾಗಿ ಸಾಲಗಳನ್ನು ನೀಡುತ್ತಿದೆ ಮತ್ತು ವಿದ್ಯಾವಂತ ನಿರುದ್ಯೋಗಿಗಳಿಗೆ ತರಬೇತಿಯನ್ನು ಸಹ ನೀಡುತ್ತಿದೆ

37 ನನ್ನ ಸರ್ಕಾರವು ಮಹಿಳೆಯರನ್ನು ಆರ್ಥಿಕವಾಗಿ ಹೆಚ್ಚು ರಚನಾತ್ಮಕವಾದ ರೀತಿಯಲ್ಲಿ ಮುಖ್ಯ ವಾಹಿನಿಗೆ ತರುವುದು ಅತ್ಯಾವಶ್ಯಕ ಎಂದು ಮನಗಂಡಿದೆ ಮಹಿಳಾ ಸಬಲೀಕರಣದ ಒಂದು ಮುಖ್ಯ ಕಾರ್ಯಕ್ರಮವಾಗಿ 'ಸ್ತ್ರೀ ಶಕ್ತಿ' ಕಾರ್ಯಕ್ರಮವನ್ನು 2000ದ ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾಯಿತು ಪರಿಣಾಮವಾಗಿ, ಈಗ 10 ಲಕ್ಷಕ್ಕೂ ಹೆಚ್ಚು ಸದಸ್ಯರಿರುವ 75,512 ಸ್ವಸಹಾಯ ಗುಂಪುಗಳು ರಚನೆಗೊಂಡಿವೆ ಈ ಗುಂಪುಗಳ ಸದಸ್ಯರು 40 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತವನ್ನು ಉಳಿತಾಯ ಮಾಡಿದ್ದಾರೆ ಈ ಗುಂಪುಗಳ ಸದಸ್ಯರನ್ನು ತರಬೇತುಗೊಳಿಸುವ ಒಂದು ಮಹಾತ್ವಾಕಾಂಕ್ಷೆಯ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ

38 ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ''ಮನ ಬೆಳಕು'' ಮತ್ತು ''ಉದ್ಯೋಗಿನಿ'' ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ ಇವುಗಳ ಅಡಿಯಲ್ಲಿ ನಾಲಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ ಇದರಿಂದ ಅವರು ಸ್ವಯಂ ಉದ್ಯೋಗಿಗಳಾಗಲು ಸಹಾಯವಾಗುತ್ತಿದೆ 2001-02ನೇ ಸಾಲಿನಲ್ಲಿ ಮನೆ ಬೆಳಕು ಯೋಜನೆಗೆ ಹಣಕಾಸು ಮತ್ತು ಭೌತಿಕ ಗುರಿಯನ್ನು ದ್ವಿಗುಣಗೊಳಿಸಲಾಗಿದೆ ಈ ಯೋಜನೆ ಅಡಿಯಲ್ಲಿ 4 000 ಮಹಿಳೆಯರಿಗೆ ಸೌಲಭ್ಯ ದೊರಕಲಿದ ವಿವಿಧ ಕ್ಷೇತ್ರಗಳಲ್ಲ ಮಹಿಳೆಯರಿಗೆ ತರಬೇತಿ ನೀಡಲಾಗುತ್ತಿದೆ ಮತ್ತು ವೃತ್ತಿಪರ ಕೋರ್ಸುಗಳನ್ನು ಅಧ್ಯಯನ ಮಾಡಲು ಹಣಕಾಸು ನೆರವು ಒದಗಿಸಲಾಗುತ್ತಿದೆ

39 ಅಂಗವಿಕಲರ ಬಗ್ಗೆ ಸರ್ಕಾರ ಹಾಗೂ ಸಮಾಜ ಗಮನ ಹರಿಸಬೇಕಾದ ಅಗತ್ಯವಿದೆ ನನ್ನ ಸರ್ಕಾರವು ವಿಶೇಷ ಶಾಲಗಳು ಹಾಗೂ ಅನುದಾನಿತ ಶಾಲೆಗಳ ಮೂಲಕ 5000 ಅಂಗವಿಕಲ ಮಕ್ಕಳಿಗೆ ಶಿಕ್ಷಣ ನೀಡುತ್ತಿದೆ ಕಿವುಡು ಮಕ್ಕಳಿಗೆ ಶಿಕ್ಷಣ ನೀಡುವ ಬಗ್ಗೆ ಶಿಕ್ಷಕರಿಗೆ ತರಬೇತಿ ನೀಡಲು ಒಂದು ಶಿಕ್ಷಕ ತರಬೇತಿ ಸಂಸ್ಥೆಯನ್ನು ತೆರೆಯಲಾಗಿದೆ ಅಂಗವಿಕಲರ ವಿಶೇಷ ಶಾಲೆಗಳಲ್ಲಿನ ಅತ್ಯುತ್ತಮ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿಗಳನ್ನು ನೀಡುವ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದೆ 40,000 ಅಂಧರಿಗೆ ಉಚಿತ ಬಸ್ ಪಾಸ್ ಸೌಲಭ್ಯ ನೀಡಲಾಗಿದೆ ಈ ಸೌಲಭ್ಯವನ್ನು ಇದೇ ಮೊದಲ ಬಾರಿಗೆ, ಮೂಳೆ ಸಂಬಂಧಿ ವಿಕಲತೆಯುಳ್ಳ 20,000 ಜನರಿಗೂ ವಿಸ್ತರಿಸಲಾಗಿದೆ

40 ನನ್ನ ಸರ್ಕಾರವು ರಾಜ್ಯ ಜಲ ನೀತಿಯನ್ನು ರೂಪಿಸಿದೆ ರಾಜ್ಯದ ಜಲಸಂಪನ್ಮೂಲ ಬಹಳ ಸೀಮಿತವಾಗಿದ್ದು ಅದು ಬಹಳ ಒತ್ತಡಕ್ಕ ಸಿಲುಕಿದೆ ಮತ್ತು ಕ್ಷೀಣಿಸುತ್ತಿದೆ ಎಂಬ ಸಂಗತಿಯನ್ನು ಏರುಪೇರಾಗಿರುವ ಮಳೆ ಪ್ರಮಾಣ ಅಂತರ್ಜಲದ ಅಸಮ ಬಳಕೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಭಾರಿ ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳ ಮೂಲಕ 45 ಲಕ್ಷ ಹೆಕ್ಟೇರು ಭೂಮಿಗೆ ನೀರಾವರಿ ಒದಗಿಸುವುದು ಈ ನೀತಿಯ ಗುರಿಯಾಗಿದೆ ಇದಲ್ಲದೇ ಅಂತರ್ಜಲವನ್ನು ಬಳಸಿಕೊಂಡು 16 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ ಈ ಜಲ ನೀತಿಯಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಸಬೇಕಾದ ಅಗತ್ಯವನ್ನೂ ಗಮನದಲ್ಲಿಟ್ಟುಕೊಳ್ಳಲಾಗಿದೆ ಹಾಗೂ ನೀರಾವರಿ ನಿರ್ವಹಣೆಯಲ್ಲಿ ಬಳಕೆದಾರರೂ ಪಾಲ್ಗೊಳ್ಳುವಂತೆ ಮಾಡಿ ನೀರಾವರಿ ಭೂಮಿಯ ಉತ್ಪಾದಕತೆಯನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ

41 ಬಹಳ ಕಾಲದಿಂದ ನಿರ್ಮಾಣ ಹಂತದಲ್ಲೇ ಉಳಿದಿದ್ದ ಹಲವಾರು ದೊಡ್ಡ ಹಾಗೂ ಮಧ್ಯಮ ನೀರಾವರಿ ಯೋಜನೆಗಳು 2001-02ರಲ್ಲಿ ಪೂರ್ಣಗೊಂಡಿವೆ ಬೆಳಗಾವಿ ಜಿಲ್ಲೆಯ ಹಿರಣ್ಯಕೇಶಿ ಯೋಜನೆ, ರಾಯಚೂರು ಜಿಲ್ಲೆಯ ಹಿರೇಹಳ್ಳ ಮತ್ತು

ಮಸಿ ನಾಳಾ ಯೋಜನೆಗಳು, ಹಾನನ ಜಿಲ್ಲೆಯ ಯಗಚಿ ಗುಲ್ಬರ್ಗಾ ಜಿಲ್ಲೆಯ ಮೋಲ್ಲಮರಿ ಕೆಳದಂಡೆ ಮತ್ತು ಕೊಡಗು ಜಿಲ್ಲೆಯ ನೋಮವಾರವೇಟೆ ಏತ ನೀರಾವರಿ ಯೋಜನೆ ಮುಂತಾದವು ಪೂರ್ಣಗೊಂಡಿವ

42 ಕೃಷ್ಣಾ ಭಾಗ್ಯ ನಿಗಮದ ಹಾಗೂ ಕರ್ನಾಟಕ ನೀರಾವರಿ ನಿರ್ಮಾಣ ನಿಗಮದ ಕಾಮಗಾರಿಗಳು ತ್ವರಿತ ಗತಿಯಲ್ಲಿ ಸಾಗುತ್ತಿವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲು ನನಗೆ ಸಂತೋಷವಾಗುತ್ತಿದೆ ಕೃಷ್ಣಾ ಭಾಗ್ಯ ಜಲ ನಿಗಮವು, 2001-02ರಲ್ಲಿ 1,06,000 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುತ್ತದೆ ಅಂತೆಯೇ 2002ರ ಮಾರ್ಚ್ ವೇಳೆಗೆ ಕೆಎನ್‌ಎನ್‌ಎಲ್ 25 000 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಿದೆ ಇದರಿಂದಾಗಿ ಕಳೆದ ವರ್ಷಕ್ಕಿಂತ ಎರಡು ಪಟ್ಟು ನೀರಾವರಿ ಸೌಲಭ್ಯ ಒದಗಿಸಿದಂತಾಗುತ್ತದೆ ಹಿವ್ವರಗಿ ಯೋಜನೆ ಹಾಗೂ ಸಿಂಗಟಾಲೂರು ಏತ ನೀರಾವರಿ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲಾಗಿದ್ದು, 7 765 ಹೆಕ್ಟೇರು ಭೂಮಿಗೆ ನೀರಾವರಿ ಒದಗಿಸುವುದಕ್ಕಾಗಿ ಬೀಮಾ ನದಿಗೆ ಅಡ್ಡಲಾಗಿ 4 ಒಡ್ಡುಗಳನ್ನು ನಿರ್ಮಿಸುವ ಕಾರ್ಯವನ್ನು ಈ ವರ್ಷದಲ್ಲಿಯೇ ಪ್ರಾರಂಭಿಸಲಾಗುತ್ತದೆ

43 ನೀರು ಬಳಕೆದಾರರ ಸಹಕಾರ ಸಂಘಗಳ ನೋಂದಣಿ ಕಾರ್ಯ ತ್ವರಿತಗತಿಯಲ್ಲಿ ಸಾಗಿದ್ದು, ಈ ವರೆಗೆ 1 140 ಸಂಘಗಳು ನೋಂದಾಯಿಸಿಕೊಂಡಿವೆ ನೀರಾವರಿ ಕಾಲುವೆಗಳು ಸ್ವಾಭಾವಿಕ ನಾಲೆಗಳು ಹಾಗೂ ನದಿಗಳಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಕುಡಿಯುವ ಉದ್ದೇಶಕ್ಕಾಗಿ ಪೂರೈಕೆಯಾಗುವ ನೀರಿನ ಮೇಲೆ, ಜಲ ಸಂಪನ್ಮೂಲ ಇಲಾಖೆಗೆ ಸ್ವಾಮ್ಯ ಶುಲ್ಕ ಸಂದಾಯ ಮಾಡುವುದಕ್ಕೆ ವಿನಾಯಿತಿ ನೀಡಬೇಕೆಂಬ ತೀರ್ಮಾನ ಕೈಗೊಳ್ಳಲಾಗಿದೆ

44 2001ರ ಆಗಸ್ಟ್ ತಿಂಗಳಲ್ಲಿ ಮಹಾರಾಷ್ಟ್ರ ಸರ್ಕಾರದೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿದ್ದು, ಇದರಿಂದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 15,167 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವುದಕ್ಕೆ ದೂಧ್‌ಗಂಗಾ ಯೋಜನೆಯಿಂದ 1 ಟಿಎಂಸಿ ನೀರು ಬಳಸಿಕೊಳ್ಳಲು ಸಾಧ್ಯವಾಗುತ್ತದೆ

45 ರಾಜ್ಯದ ಒಹುತೇಕ ಭಾಗಗಳಲ್ಲಿ ಸಣ್ಣ ನೀರಾವರಿಯೇ ಜೀವಾಳ ಹೊಸ ಕೆರೆಗಳ ನಿರ್ಮಾಣ ಹಳೆ ಕೆರೆಗಳ ಜೀರ್ಣೋದ್ಧಾರ ಒಡ್ಡುಗಳು, ಅಣೆಕಟ್ಟುಗಳು ಹಾಗೂ ಕಟ್ಟೆಗಳ ವಿಸ್ತರಣೆಗಳ ನಿರ್ಮಾಣ ಏತ ನೀರಾವರಿ ಯೋಜನೆಗಳ ಅನುಷ್ಠಾನ ಇವುಗಳಿಗೆ ಒತ್ತು ನೀಡಲಾಗಿದೆ ಜಲ ಸಂವರ್ಧನೆ ಯೋಜನಾ ಸಂಪದ ಮೂಲಕ ಮುಂದಿನ ಏದು ವರ್ಷಗಳಲ್ಲಿ ನೀರಾವರಿ ಕರೆಗಳನ್ನು ಸುಧಾರಣೆ ಮಾಡುವ ಒಂದು ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಅದಕ್ಕಾಗಿ 995

ಕೋಟಿ ರೂಪಾಯಿ ನೆರವು ಪಡೆಯಲು ವಿಶ್ವ ಬ್ಯಾಂಕನ್ನು ಸಂಪರ್ಕಿಸಲಾಗಿದ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ಜಲ ಸಂಪರ್ಧನೆ ಯೋಜನಾ ಸಂಘವನ್ನು ರಚಿಸಲಾಗಿದ್ದು ನೀರಾವರಿ ನಿರ್ವಹಣೆಯಲ್ಲಿ ಬಳಕೆದಾರರು ಪಾಲ್ಗೊಳ್ಳುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ

46 ಪ್ರತಿ ಹೋಬಳಿಯಲ್ಲಿ ಒಂದು ಕೆರೆ ಜೀರ್ಣೋದ್ಧಾರ ಮಾಡುವುದಕ್ಕಾಗಿ 2001ರ ನವೆಂಬರ್ 30 ರಿಂದ 'ರೈತ ಕಾಯಕ ಕೆರೆ' ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ ಜಲಾನಯನ ಹಾಗೂ ನೀರು ಪೂರೈಕೆ ಪ್ರದೇಶಗಳ ಸುಧಾರಣೆಯೂ ಸೇರಿದಂತೆ ಸಮಗ್ರವಾಗಿ ಜೀರ್ಣೋದ್ಧಾರ ಮಾಡಲು ಈ ಯೋಜನೆಯಲ್ಲಿ ಒತ್ತು ನೀಡಲಾಗುತ್ತದೆ

47 ಮುಂದಿನ ವರ್ಷ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿರುವ ವಶ್ಚಿಮವಾಹಿನಿ ನದಿಗಳಿಗ ಅಡ್ಡಲಾಗಿ ಅಣೆಕಟ್ಟೆಗಳನ್ನು ನಿರ್ಮಿಸುವ ಯೋಜನೆಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ ಈ "ವಶ್ಚಿಮವಾಹಿನಿ ಯೋಜನೆ" ಅಡಿ 907 ಕಾಮಗಾರಿಗಳನ್ನು ಕೈಗತ್ತಿಕೊಳ್ಳಲಿದ್ದು ಇದರಿಂದ 24,000 ಹೆಕ್ಟೇರು ಭೂಮಿಗ ನೀರು ಪೂರೈಸುವುದಷ್ಟೇ ಅಲ್ಲದೇ ಕೆಲವು ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರನ್ನೂ ಪೂರೈಸಲಾಗುತ್ತದೆ 1,000 ಕಿ.ಮೀ.ಗಳ ಆಯಕಟ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು ಇದರಿಂದ ರೈತರ ಸಂಚಾರ ಹಾಗೂ ಸಂಪರ್ಕಕ್ಕೆ ಹೆಚ್ಚು ಅನುಕೂಲವಾಗುತ್ತದೆ

48 ರಾಜ್ಯದ ಅಭಿವೃದ್ಧಿಗೆ ಒಂದು ಸುಧಾರಿತ ರಸ್ತೆ ಜಾಲದ ಅಗತ್ಯವಿದೆ ಹುಡ್ಕೋ ಆರ್ಥಿಕ ನೆರವಿನಡಿಯಲ್ಲಿ ಒಂದು ನವೀನ ಯೋಜನೆಯಾಗಿ ನನ್ನ ಸರ್ಕಾರವು 7 000 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳ ನಿರ್ವಹಣಾ ಕಾರ್ಯವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಮೂಲಕ ಈಗಾಗಲೇ ಕೈಗೆತ್ತಿಕೊಂಡಿದೆ ನನ್ನ ಸರ್ಕಾರವು ವಿಶ್ವಬ್ಯಾಂಕ್ ನೆರವಿನಡಿ 1269 ಕಿ.ಮೀ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯರಸ್ತೆಗಳ ಸುಧಾರಣೆಗಾಗಿ ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ನಬಾರ್ಡ್ ನೆರವಿನ ಒಂದು ಯೋಜನೆಯಡಿಯಲ್ಲಿ ಒಟ್ಟು 320 ಕೋಟಿ ರೂಪಾಯಿ ವೆಚ್ಚದಲ್ಲಿ 4,706 ಕಿ.ಮೀ ಗ್ರಾಮೀಣ ರಸ್ತೆಗಳನ್ನು ಸುಧಾರಣೆ ಮಾಡಲಾಗಿದ್ದು 100 ಸೇತುವೆಗಳನ್ನು ನಿರ್ಮಿಸಲಾಗಿದೆ ಮುಖ್ಯ ಜಿಲ್ಲಾ ರಸ್ತೆಗಳ ಸುಧಾರಣೆಗಾಗಿ ಕೇಂದ್ರ ರಸ್ತೆ ನಿಧಿಯಿಂದ ನೀಡಿರುವಂಥ 65 ಕೋಟಿ ರೂಪಾಯಿಗಳನ್ನು ಬಳಸಿಕೊಂಡು 86 ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಹುಡ್ಕೋದಿಂದ ಸಾಲ ನೆರವು ಪಡೆದು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು 140 ಸೇತುವೆಗಳನ್ನು ನಿರ್ಮಿಸಿದೆ ಈ ಯೋಜನಾ ಕಾಮಗಾರಿಗಳು

2002-03ರಲ್ಲಿ ಮುಂದುವರಿಯಲಿದ್ದು ಬಲಪಡಿಸಿದ ಈ ರಸ್ತೆ ಜಾಲವು ರಾಜ್ಯದ ಸರ್ವತೋಮುಖ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುವುದೆಂದು ಆಶಿಸಲಾಗಿದೆ ವಿಧಾನಸೌಧ ಸೌತ್ ಬ್ಲಾಕ್ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ

49 ನನ್ನ ಸರ್ಕಾರವು, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಯನ್ನು ಅನುಷ್ಠಾನಗೊಳಿಸಲು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಸ್ಥೆಯನ್ನು ಸ್ಥಾಪಿಸಿದೆ ಈ ಯೋಜನೆಗೆ ಆಗುವ ವೆಚ್ಚವನ್ನು 2002ರ ಸೆಪ್ಟೆಂಬರ್ 30ರ ವೇಳಗೆ ನಿಖರವಾಗಿ ಲೆಕ್ಕ ಹಾಕುವ ನಿರೀಕ್ಷೆ ಇದ್ದು, ವಿಮಾನ ನಿಲ್ದಾಣವು ಮೂರು ವರ್ಷದೊಳಗಾಗಿ ಕಾರ್ಯಾರಂಭ ಮಾಡಲಿದೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ವ್ಯಾಪಾರಿಕರು ಹಾಗೂ ಸರಕು ಸಂಚಾರ ಎರಡಕ್ಕೂ ಬೆಂಗಳೂರು ಕೇಂದ್ರಸ್ಥಾನವಾಗಲು ನೆರವಾಗುತ್ತದೆ ಮತ್ತು ರಾಜ್ಯದ ಆರ್ಥಿಕ ವ್ಯವಸ್ಥೆಗೆ ಮಹತ್ತರ ಕೊಡುಗೆ ನೀಡುತ್ತದೆ

50 ನನ್ನ ಸರ್ಕಾರವು, ರಾಜ್ಯದ ಅನೇಕ ಸ್ಥಳಗಳಲ್ಲಿ ಕಡಿಮೆ ವೆಚ್ಚದಲ್ಲಿ ವೈಮಾನಿಕ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ ಇದರಿಂದ ವೂರಕ ಸೇವೆಗಳನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ ಇದಕ್ಕೆ ಸಂಬಂಧಿಸಿದ ಕಾರ್ಯನೀತಿ ಚೌಕಟ್ಟನ್ನು ಬರುವ ವರ್ಷ ಪ್ರಕಟಿಸಲಾಗುವುದು ಸರ್ಕಾರವು ತದ್ರಿ ಬಂದರನ್ನು ನಿರ್ಮಾಣ ಒಡೆತನ ಕಾರ್ಯಾಚರಣೆ, ವಾಲು ಮತ್ತು ವರ್ಗಾವಣೆ ಆದಾರದ ಮೇಲೆ ಅಭಿವೃದ್ಧಿಪಡಿಸಲು ದಕ್ಷಿಣ ಕೊರಿಯಾದ ಹ್ಯಾಂಜಿನ್ ಇಂಜಿನಿಯರಿಂಗ್ ಅಂಡ್ ಕನ್ಸ್ಟ್ರಕ್ಷನ್ಸ್ ಕಂಪನಿಗೆ ಲೆಟರ್ ಆಫ್ ಇಂಟೆಂಟ್ ಸಹ ನೀಡಿದೆ

51 ನಗರ ಪ್ರದೇಶಗಳಲ್ಲಿ ನಾಗರಿಕ ಸೇವೆಗಳನ್ನು ಉತ್ತಮಪಡಿಸುವ ನಲುವಾಗಿ, ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ಮೂಲ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಬೇಕಾದ ಅಗತ್ಯವಿದ ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಕರ್ನಾಟಕ ಪುರಸಭೆಗಳ ಅಧಿನಿಯಮ 1964ನ್ನು ತಿದ್ದುಪಡಿ ಮಾಡಿದ್ದು, ಈ ಸಂಸ್ಥೆಗಳು ಸ್ವಯಂ ತೆರಿ ತೆರಿಗೆ ನಿರ್ಧರಣೆ ವಿಧಾನವನ್ನು ಪ್ರಾರಂಭಿಸಲು ಅವಕಾಶ ಕಲ್ಪಿಸಲಾಗಿದೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ನಗರ ಸಂಸ್ಥೆಗಳಿಗೆ ಹುಡ್ಕೋದಿಂದ 130 ಕೋಟಿ ರೂಪಾಯಿಗಳ ಸಾಲವನ್ನು ಒದಗಿಸಲಾಗಿದೆ

52 ಬೆಂಗಳೂರಿನಲ್ಲಿ 2001-02ರಲ್ಲಿ ರಿಚ್ಮಂಡ್ ಸರ್ಕಲ್ ಫ್ಲೈಓವರ್ ಮತ್ತು ಮೇಖ್ರಿ ಸರ್ಕಲ್ ಗ್ರೇಡ್ ಸೆವರೇಟರ್ ಕಾರ್ಯವು ಪೂರ್ಣಗೊಂಡಿದ್ದು, ಅವುಗಳಲ್ಲಿ ಸಂಚಾರ ಪ್ರಾರಂಭವಾಗಿದೆ 2002-03ರಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಮತ್ತು

ಬೆಂಗಳೂರು ಮಹಾನಗರ ಪಾಲಿಕೆಗಳು, ಹುಡ್ಕೋ ನೆರವಿನೊಂದಿಗೆ ಗ್ರೇಡ್ ಸೆಪರೇಟರ್ಸ್ ಮತ್ತು ರಸ್ತೆ ಜಂಕ್ಷನ್‌ಗಳ ಸುಧಾರಣೆಯೂ ಸೇರಿದಂತೆ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿವೆ

53 1072 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಕಾವೇರಿ ನೀರು ಪೂರೈಕೆ ಯೋಜನೆ IV ಘಟ್ಟದ Iನೇ ಹಂತದ ಕೆಲಸವು ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿದ್ದು ಈ ಯೋಜನೆಯು 2002ರ ಏಪ್ರಿಲ್‌ನಲ್ಲಿ ಕಾರ್ಯಾರಂಭ ಮಾಡುವ ಸಾಧ್ಯತೆ ಇದೆ ಮಂಡಳಿಯು 49 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇಡೀ ನಗರದ ಒಳಚರಂಡಿ ಮಾರ್ಗಗಳ ಪುನರ್ ವ್ಯವಸ್ಥೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಒಂದು ಯೋಜನೆಯನ್ನು ಸಹ ರೂಪಿಸಿದೆ ಇದರಿಂದ, ತೆರೆದ ಚರಂಡಿಗಳಲ್ಲಿ ಕೊಳಚೆ ನೀರು ಹರಿಯುವುದನ್ನು ತಡಯಬಹುದು ಬೆಂಗಳೂರಿನ ಸುತ್ತಮುತ್ತ ಇರುವ ನಗರ ಸ್ಥಳೀಯ ಮಂಡಳಿಗಳ ಒಳಚರಂಡಿ ಮತ್ತು ಕುಡಿಯುವ ನೀರು ಯೋಜನೆಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಗತಗೊಳಿಸಲು ಯೋಜಿಸಿದೆ

54 ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 72 ನೀರು ಪೂರೈಕೆ ಯೋಜನೆಗಳನ್ನು ಮತ್ತು 7 ಒಳ ಚರಂಡಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ 2001ರ ಮಾರ್ಚ್ ವೇಳೆಗೆ 24 ನೀರು ಪೂರೈಕೆ ಯೋಜನೆಗಳು ಕಾರ್ಯಾರಂಭ ಮಾಡಲಿವೆ

55 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಳೆದ ಎರಡು ವರ್ಷಗಳಲ್ಲಿ 25 000 ನಿವೇಶನಗಳನ್ನು ಹಂಚಿಕೆ ಮಾಡಿದೆ ಪ್ರಾಧಿಕಾರವು ಅನಧಿಕೃತ ಕಟ್ಟಡಗಳನ್ನು ಕಡಿಮೆ ಹಾಕಿ ತನ್ನ ಸ್ವತ್ತನ್ನು ಮತ್ತೆ ತನ್ನ ವಶಕ್ಕೆ ತೆಗೆದುಕೊಳ್ಳಲು ಸಹ ತೀವ್ರ ಪ್ರಯತ್ನ ನಡೆಸಿದೆ ಇದುವರೆಗೆ 271 ಕೋಟಿ ರೂಪಾಯಿಯಷ್ಟು ಮೌಲ್ಯದ ಸ್ವತ್ತನ್ನು ವಶಕ್ಕೆ ತೆಗೆದುಕೊಂಡಿದ ಪ್ರಾಧಿಕಾರವು ಈ ವರ್ಷ ಕೊನೆಯ ವೇಳೆಗೆ ತುಮಕೂರು ರಸ್ತೆಯಿಂದ ಮೈಸೂರು ರಸ್ತೆಯವರೆಗೆ ಔಟರ್ ರಿಂಗ್ ರೋಡ್ ವೈಟ್‌ಫೀಲ್ಡ್‌ನಲ್ಲಿ ಫ್ಲೈ ಓವರ್ ಮತ್ತು ಬೆನ್ನಿಗಾನ ಹಳ್ಳಿಯಲ್ಲಿ ಮೇಜರ್ ಗ್ರೇಡ್ ಸೆಪರೇಟರ್ ಕಾರ್ಯವನ್ನು ಪೂರ್ಣಗೊಳಿಸಲಿದೆ 2002-03ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವ್ಯಾಪಕ ಅಭಿವೃದ್ಧಿ ಯೋಜನೆಯ ಪರಿಷ್ಕರಣೆ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತದೆ, ಮನೆ ನಿವೇಶನಗಳ ಹಂಚಿಕೆಗಾಗಿ ಹೊಸ ಲೇಔಟ್‌ಗಳನ್ನು ರಚಿಸುತ್ತದೆ ಮತ್ತು ಅನಧಿಕೃತ ಕಟ್ಟಡಗಳನ್ನು ಕೆಡವಿ ಹಾಕುವ ಕಾರ್ಯವನ್ನು ಮುಂದುವರಿಸುತ್ತದೆ

56 ನನ್ನ ಸರ್ಕಾರವು, ಹೊಸ ಕೈಗಾರಿಕಾ ನೀತಿಯನ್ನು ಪ್ರಕಟಿಸಿದೆ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸುವುದಕ್ಕೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ, ವ್ಯವಹಾರ

ವರಿನರದ ನಿಯಂತ್ರಣವನ್ನು ತೆಗೆದು ಹಾಕುವುದಕ್ಕೆ, ವ್ಯವಸ್ಥೆಯನ್ನು ಸರಳಗೊಳಿಸುವುದಕ್ಕೆ ಮತ್ತು ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಒತ್ತು ನೀಡುವ ಈ ನೀತಿಯು, ಖಾಸಗಿ ವಲಯದ ಪ್ರಮುಖ ಪಾತ್ರವನ್ನು ಮನಗಂಡಿದೆ

57 ಕರ್ನಾಟಕವು ಕೈಗಾರಿಕೋದ್ಯಮಿಗಳನ್ನು ಈಗಲೂ ಆಕರ್ಷಿಸುತ್ತಿದೆ ಏಪ್ರಿಲ್ 2001 ರಿಂದ ಡಿಸೆಂಬರ್ 2001ರವರೆಗೆ ರಾಜ್ಯ ಸಿಂಗಲ್ ವಿಂಡೋ ಏಜೆನ್ಸಿಯು 1654 ಕೋಟಿ ರೂಪಾಯಿಗಳ ಹೂಡಿಕೆಯ 78 ಭಾರಿ ಮತ್ತು ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಿದೆ ಇವು, ಸುಮಾರು 39,400 ಜನರಿಗೆ ಉದ್ಯೋಗ ಒದಗಿಸಲಿವೆ ಇದೇ ಅವಧಿಯಲ್ಲಿ, 5071 ಕೋಟಿ ರೂಪಾಯಿಗಳ ಹಣ ಹೂಡಿಕೆಯ 18 ಮೆಗಾ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಈ ಯೋಜನೆಗಳು 26,500 ಜನರಿಗೆ ಉದ್ಯೋಗ ಒದಗಿಸಲಿವೆ ನನ್ನ ಸರ್ಕಾರವು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪ್ರೋತ್ಸಾಹಿಸುತ್ತಿದೆ ಏಪ್ರಿಲ್ 2001ರಿಂದ ಡಿಸೆಂಬರ್ 2001ರವರೆಗಿನ ಅವಧಿಯಲ್ಲಿ, 303 ಕೋಟಿ ರೂಪಾಯಿಗಳ ಹೂಡಿಕೆಯ 10,260 ಘಟಕಗಳನ್ನು ನೋಂದಾಯಿಸಲಾಗಿದೆ, ಇವು 45 900 ಜನರಿಗೆ ಉದ್ಯೋಗ ಒದಗಿಸಲಿವೆ

58 ರಾಜ್ಯ ಸರ್ಕಾರವು, ಕೈಗಾರಿಕೆಗಳಿಗೆ ಅನುಮೋದನೆ ತ್ವರಿತಗತಿ ವಿಧಾನಗಳನ್ನು ಸುಗಮಗೊಳಿಸುವುದಕ್ಕಾಗಿ ಹಾಗೂ ಸರಳಗೊಳಿಸುವುದಕ್ಕಾಗಿ ವ್ಯಾಪಾರ ವ್ಯವಹಾರ ನಿಯಂತ್ರಣವನ್ನು ಕಡಿಮೆ ಮಾಡಲು ಅನೇಕ ವ್ಯಾಪಕ ಸುಧಾರಣೆಗಳನ್ನು ರೂಪಿಸಿದೆ ಒಂದು ಸಾಮಾನ್ಯ ಉನ್ನತ ಮಟ್ಟದ ಸಮಿತಿ ಮತ್ತು ಸಿಂಗಲ್ ವಿಂಡೋ ಏಜೆನ್ಸಿಯನ್ನು ರಚಿಸುವುದು, ಕರ್ನಾಟಕ ಉದ್ಯೋಗ ಮಿತ್ರವನ್ನು ಬಲಪಡಿಸುವುದು, ವಿವಿಧ ಅಧಿ ನಿಯಮಗಳ ಮತ್ತು ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ವಿವಿಧ ಅರ್ಜಿ ನಮೂನೆಗಳ ಬದಲಿಗೆ ಒಂದೇ ಅರ್ಜಿ ನಮೂನೆಯನ್ನು ನಿಗದಿಪಡಿಸುವುದು ಮತ್ತು ಏಕರೂಪದ ವಿವರ ಪಟ್ಟಿಗಳ ಸಲ್ಲಿಕೆಗೆ ಅವಕಾಶ ಕಲ್ಪಿಸುವುದು ಇವು ಈ ಸುಧಾರಣಾ ಕ್ರಮಗಳ ಕೆಲವು ಪ್ರಮುಖ ಅಂಶಗಳಾಗಿವೆ ಈ ಕ್ರಮಗಳನ್ನು ಕಾರ್ಯರೂಪಕ್ಕೆ ತರಲು ಒಂದು ಕಾನೂನು ಚೌಕಟ್ಟನ್ನು ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ಇಂಡಸ್ಟ್ರೀಸ್ (ಫೆಸಿಲಿಟೇಷನ್) ಬಿಲ್, 2002ನ್ನು ವಿಧಾನ ಮಂಡಲದಲ್ಲಿ ಮಂಡಿಸಲು ಉದ್ದೇಶಿಸಲಾಗಿದೆ

59 ರೇಷ್ಮೆ ಇಲಾಖೆಯು ಕೇಂದ್ರ ರೇಷ್ಮೆ ಮಂಡಲಿಯ ಸಹಕಾರ ಮತ್ತು ನೆರವಿನೊಂದಿಗೆ ತ್ವರಿತ ಅಭಿವೃದ್ಧಿ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುತ್ತಿದೆ ಈ ಕಾರ್ಯಕ್ರಮದ ಅಡಿಯಲ್ಲಿ, ಹಸಿ ನೀರಾವರಿಗೆ ಸಹಾಯ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ ಹಾಗೂ ರೇಷ್ಮೆ ಹುಳು ಸಾಕಣೆ ಮನೆಗಳ ನಿರ್ಮಾಣಕ್ಕೆ ಮತ್ತು ಆಧುನಿಕ ಮಲ್ಟಿ ಎಂಡ್ ರೀಲಿಂಗ್ ಘಟಕಗಳ ಸ್ಥಾಪನೆಗೆ ನೆರವು ನೀಡಲಾಗುತ್ತದೆ ಸಕ್ಕರೆ ವಲಯದಲ್ಲಿ ರಾಜ್ಯದಲ್ಲಿ 16 ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲಾಗುತ್ತಿದ್ದು, ಈ

ವೈಕ 10 ಕಾರ್ಖಾನೆಗಳು ಸಹಕಾರ ವಲಯದಲ್ಲಿವ ಸಕ್ಕರೆ ಕಾರ್ಖಾನೆಗಳಿಂದ ವಸೂಲು ಮಾಡುವ ರಸ್ತೆ ಉಪಕರವನ್ನು ಸಕ್ಕರೆ ಕಾರ್ಖಾನೆಗಳ ಸುತ್ತಮುತ್ತಲಿನ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಉಪಯೋಗಿಸಲಾಗುತ್ತಿದೆ

60 ಸಿ ಐ ಐ ಪಾಲುದಾರಿಕೆ ಶೃಂಗಸಭೆ 2002ರ ಜನವರಿ 5 ರಿಂದ 11ರವರೆಗೆ ಬೆಂಗಳೂರಿನಲ್ಲಿ ನಡೆಯಿತು ಈ ಶೃಂಗಸಭೆಯಲ್ಲಿ ವಿವಿಧ ವಲಯಗಳಲ್ಲಿ ಕರ್ನಾಟಕಕ್ಕೆ ಇರುವ ಶಕ್ತಿ ಸಾಮರ್ಥ್ಯದ ಬಗ್ಗೆ ಹಾಗೂ ರಾಜ್ಯದಲ್ಲೇ ಮತ್ತು ರಾಜ್ಯದ ಹೊರಗಿನಿಂದ ಎಷ್ಟು ಹಣ ಹೂಡಿಕೆ ಗುರಿ ಇಟ್ಟುಕೊಳ್ಳಬೇಕು ಎನ್ನುವ ಬಗ್ಗೆ ಚರ್ಚಿಸಲಾಯಿತು ಬ್ರಿಟಿಷ್ ಪ್ರಧಾನಿಯವರು ಮತ್ತು ವಿಶ್ವದ ಎಲ್ಲಾ ಕಡೆಯಿಂದ ಕೈಗಾರಿಕೆ ಹಾಗೂ ವ್ಯಾಪಾರ ಕ್ಷೇತ್ರಗಳ ಖ್ಯಾತ ವರಿಣಿತರು ಭಾಗವಹಿಸಿದ್ದ ಈ ಶೃಂಗಸಭೆಯು ಅತ್ಯಂತ ಯಶಸ್ವಿಯಾಯಿತು

61 ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು, ಆಡಳಿತದ ಗುಣಮಟ್ಟವನ್ನು ಉತ್ತಮ ಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದೆ ಮಾಹಿತಿ ತಂತ್ರಜ್ಞಾನ ಇಲಾಖೆಯ ವಿವಿಧ ಇಲಾಖೆಗಳಲ್ಲಿ ಅವುಗಳ ಮಾಹಿತಿ ತಂತ್ರಜ್ಞಾನ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ನೆರವಾಗುವ ಮಹತ್ವದ ಪಾತ್ರವಹಿಸುತ್ತಿದೆ ಆಯ್ದ 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್‌ಗಳನ್ನು ಪ್ರಾರಂಭಿಸುವ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ ಖಜಾನೆ ಗಣಕೀಕರಣವು ಇನ್ನೇನು ಮುಗಿಯಲಿದೆ 150 ಯುವ ಡಾಟ್ ಕಾಮ್ ಕೇಂದ್ರಗಳು ಈಗಾಗಲೇ ಕಾರ್ಯಾರಂಭ ಮಾಡಿವೆ ಇಂಜಿನಿಯರಿಂಗ್ ಕಾಲೇಜುಗಳ, ಮಾಹಿತಿ ತಂತ್ರಜ್ಞಾನ ವಿಭಾಗಗಳಲ್ಲಿ ಸೀಟುಗಳ ಸಂಖ್ಯೆಯನ್ನು ವರ್ಷಕ್ಕೆ 10 000 ದಿಂದ 20,000ಕ್ಕೆ ಏರಿಸಲಾಗಿದೆ ಹಾಗೂ ಐಟಿ ಶಿಕ್ಷಣ ಗುಣಮಟ್ಟ ಮಂಡಳಿಯನ್ನು ರಚಿಸಲಾಗಿದೆ ಈ ಮಂಡಳಿ ಮಹತ್ವದ ಹಾಗೂ ನಿರ್ಣಾಯಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ ಒಂದು ಉತ್ತಮ ಮಟ್ಟದ ಕನ್ನಡ ಕೀಬೋರ್ಡನ್ನು ನಿರ್ದಿಷ್ಟಪಡಿಸಲಾಗಿದೆ ಮತ್ತು ಕನ್ನಡದಲ್ಲಿ ಎಲ್ಲ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಕನಿಷ್ಟ ಗುಣಮಟ್ಟಗಳನ್ನು ನಿಗದಿಪಡಿಸಲಾಗಿದೆ ನನ್ನ ಸರ್ಕಾರವು ವಿದ್ಯುನ್ಮಾನ ಆಡಳಿತ ನೀತಿಯನ್ನು ರೂಪಿಸುತ್ತಿದೆ ಈ ನೀತಿಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು

62 ಮುಂಬರುವ ದಿನಗಳಲ್ಲಿ ಜೈವಿಕ ತಂತ್ರಜ್ಞಾನದಂಥ ಜ್ಞಾನ ಆಧಾರಿತ ಕೈಗಾರಿಕೆಗಳು ಗರಿಷ್ಠ ಸಂಪತ್ತನ್ನು ಉತ್ಪಾದಿಸಲಿವೆ ಒಂದು ಜೈವಿಕ ತಂತ್ರಜ್ಞಾನ 'ವಿಷನ್ ಗ್ರೂಪ್' ಅನ್ನು ರಚಿಸಲಾಗಿದೆ ಐ ಸಿ ಐ ಸಿ ಐ ಯು, ಜೈವಿಕ ಮಾಹಿತಿ ತಂತ್ರಜ್ಞಾನ ಮತ್ತು ಅನ್ವಯಿಕ ಜೈವಿಕ ತಂತ್ರಜ್ಞಾನ ಸಂಸ್ಥೆಗೆ 5 ಕೋಟಿ ರೂಪಾಯಿ ಬಂಡವಾಳ ಹೂಡಲು ಒಪ್ಪಿಕೊಂಡಿದೆ ಇದು, ಜನವರಿ 2002ರಲ್ಲಿ ಕಾರ್ಯಾರಂಭ ಮಾಡಲಿದೆ

ಈ ಸಹಸ್ರಮಾನದ ಜೈವಿಕ ತಂತ್ರಜ್ಞಾನ ನೀತಿಯನ್ನು 2001ರ ಪೆಬ್ರವರಿ 24ರಂದು ಪ್ರಕಟಿಸಲಾಯಿತು ಬೆಂಗಳೂರು ಬಯೋಡಾಟ್‌ಕಾಮ್ ಮೇಳವನ್ನು 2001ರ ಏಪ್ರಿಲ್ 15 ರಿಂದ 17ರವರೆಗೆ ಏರ್ಪಡಿಸಲಾಗಿತ್ತು ಇದು ಬೆಂಗಳೂರು ಐಟಿಡಾಟ್‌ಕಾಮ್ ಮೇಳದಂತೆಯೇ ಪ್ರತಿವರ್ಷ ಜನಪ್ರಿಯವಾಗುತ್ತದೆಂದು ಆಶಿಸಲಾಗಿದೆ

63 ನಾವು, ಕೈಗಾರೀಕರಣ ಮತ್ತು ಅಭಿವೃದ್ಧಿ ಕಾರ್ಯ ಕೈಗೊಳ್ಳುವಾಗ ಪರಿಸರದ ಬಗ್ಗೆಯೂ ಕಾಳಜಿ ವಹಿಸಬೇಕಾಗಿದೆ ನಾರ್ವೆ ದೇಶದ, ನೆರವಿನೊಂದಿಗೆ ಪರಿಸರ ಮತ್ತು ಜೀವಿ ಪರಿಸ್ಥಿತಿ ವಿಜ್ಞಾನ ಇಲಾಖೆಯು ಐ ಎನ್ ಇ ಪ ಕಾರ್ಯಕ್ರಮದ IIನೇ ಹಂತವನ್ನು ಪ್ರಾರಂಭಿಸಲಿದೆ ಇದು ಪರಿಸರ ಸಂರಕ್ಷಣೆ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಸಮಗ್ರ ಸಮುಚ್ಚಯ ಆಧಾರಿತ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಲಿದೆ ಮಲೆನಾಡು ಮತ್ತು ಮೈದಾನ ಹಾಗೂ ನಗರ ಪ್ರದೇಶಗಳಲ್ಲಿನ ಪರಿಸರದ ಮೇಲೆ ತೀವ್ರ ಒತ್ತಡ ಬಿದ್ದಿರುವಂಥ ಸಮುಚ್ಚಯಗಳನ್ನು ಗುರುತಿಸಿ, ಸಮಗ್ರ ಪರಿಸರ ಅಭಿವೃದ್ಧಿಗೆ ಒಂದು ಮಾದರಿಯನ್ನು ಒದಗಿಸಲಾಗುವುದು

64 ಬಾಲಕಾರ್ಮಿಕ ಪದ್ಧತಿಯನ್ನು ತೊಡೆದು ಹಾಕಲು ಮತ್ತು 14 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಮಕ್ಕಳನ್ನು ಶೋಷಣೆಯಿಂದ ಪಾರು ಮಾಡಲು ನನ್ನ ಸರ್ಕಾರ ಮಹತ್ವಾಕಾಂಕ್ಷೆಯ ಕ್ರಿಯಾಯೋಜನೆಯನ್ನು ಆರಂಭಿಸಿದೆ ಪುನರ್ ವಸತಿಯ ಕ್ರಮವಾಗಿ 12 443 ಬಾಲಕಾರ್ಮಿಕರನ್ನು ಅನೌಪಚಾರಿಕ ಶಾಲೆಗಳಿಗೆ ಸೇರಿಸಲಾಗಿದ ಎಲ್ಲಾ ಜಿಲ್ಲೆಗಳಲ್ಲಿ ಬಾಲಕಾರ್ಮಿಕರ ಪುನರ್ ವಸತಿಗಾಗಿ ವಸತಿಸಹಿತ ಶಾಲೆಗಳನ್ನು ತೆರೆಯಲು ಏರ್ಪಾಡು ಮಾಡಲಾಗಿದೆ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳಿಗೆ ಅನುಕೂಲಕರ ಕೆಲಸದ ಸಮಯವನ್ನು ಕಲ್ಪಿಸುವ ಸಲುವಾಗಿ 1961ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮವನ್ನು ತಿದ್ದುಪಡಿ ಮಾಡಲಾಗಿದೆ ಯಾವುದೇ ಸಮಯದ ನಿಬಂಧವಿಲ್ಲದೆ ಕಾರ್ಯನಿರ್ವಹಿಸಲು ಇದರಿಂದ ಸಾಧ್ಯವಾಗುತ್ತದೆ ಅಸಂಘಟಿತ ವಲಯದಲ್ಲಿನ ಕೆಲಸಗಾರರಿಗೆ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಕ್ರಮಗಳಿಗೆ ಅವಕಾಶ ಕಲ್ಪಿಸುವ ವಿಧೇಯಕವನ್ನು ವಿಧಾನಮಂಡಲದ ಈ ಅಧಿವೇಶನದಲ್ಲಿ ಮಂಡಿಸಲಾಗುವುದು 2002-03ನೇ ಸಾಲಿನಲ್ಲಿ 'ಕರ್ನಾಟಕ ಕಾರ್ಮಿಕ ತರಬೇತಿ ಸಂಸ್ಥೆ'ಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದ ಈ ಸಂಸ್ಥೆಯು ಕಾರ್ಮಿಕ ಇಲಾಖೆಯ ವ್ಯವಸ್ಥಾಪಕ ಸಿಬ್ಬಂದಿ ವರ್ಗ, ಕೆಲಸಗಾರರು ಹಾಗೂ ಅಧಿಕಾರಿಗಳು ಮುಂತಾದ ಹಿತಾಸಕ್ತಿದಾರರಿಗೆ ತರಬೇತಿ ಶಿಕ್ಷಣವನ್ನು ನೀಡುತ್ತದೆ

65 ಕೈಗಾರಿಕಾ ಸಂಸ್ಥೆಗಳು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಮೂಲ ಸೌಲಭ್ಯವನ್ನು ಉತ್ತಮಪಡಿಸಲು ಹಾಗೂ ತರಬೇತಿಯಲ್ಲಿ ಇನ್ನಷ್ಟು ಸುಧಾರಣೆ ತರಲು

ನೆರವು ನೀಡುವುದಕ್ಕೆ ಮುಂದೆ ಬಂದಿವೆ ಮತ್ತು 64 ಕೈಗಾರಿಕಾ ಕಾರ್ಯನಂನೆಗಳು ಒಪ್ಪಂದ ಪತ್ರಕ್ಕೆ ಸಹಿ ಮಾಡಿವೆ 2001-02ನೇ ಸಾಲಿನಲ್ಲಿ, ರಾಜ್ಯದಲ್ಲಿ ಏಳು ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ನಂಸ್ಥೆಗಳನ್ನು ಆರಂಬಿಸಲಾಗಿದೆ ಕೈಗಾರಿಕಾ ತರಬೇತಿ ನಂಸ್ಥೆಗಳಲ್ಲಿನ ಹೆಚ್ಚುವರಿ ಸೀಟುಗಳ ಪೈಕಿ ಶೇ 20ರಷ್ಟು ಸೀಟುಗಳನ್ನು ವಿಶಿಷ್ಟ ಜಾತಿಯವರಿಗೆ ಮೀಸಲಿಡಲಾಗಿದೆ

66 ಜೀವಿ ವಿಸ್ಥಿತಿ ಸಮತೋಲನವನ್ನು ಕಾಪಾಡುವಲ್ಲಿ ಅರಣ್ಯಗಳ ಪಾತ್ರ ತುಂಬಾ ಮಹತ್ವದ್ದು ಎನ್ನುವುದು ನನ್ನ ಸರ್ಕಾರಕ್ಕೆ ಗೊತ್ತಿದೆ ಅರಣ್ಯಗಳು ನಾವಿರಾರು ಜನರಿಗೆ ಜೀವನಾದಾರವಾಗಿವೆ ಈ ಅಮೂಲ್ಯ ಅರಣ್ಯಗಳನ್ನು ನಿರಂತರವಾಗಿ ಬಳಸುವುದಕ್ಕೆ ಅನುಕೂಲವಾಗುವಂತೆ ಅವುಗಳ ವ್ಯಾಪ್ತಿಯನ್ನು ವಿನ್ತರಿಸುವ, ಸಂರಕ್ಷಿಸುವ ಮತ್ತು ಕಾಪಾಡುವ ಪ್ರಯತ್ನ ನಮ್ಮದು 2001-02ನೇ ಸಾಲಿನಲ್ಲಿ 49,150 ಹೆಕ್ಟೇರುಗಳಷ್ಟು ಅವನತಿ ಹೊಂದಿದ ಅರಣ್ಯ ಭೂಮಿಯನ್ನು ವನ ನಿರ್ಮಾಣ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡಿಸಲಾಗಿದೆ 2002-03ರಲ್ಲಿ 19 000 ಹೆಕ್ಟೇರುಗಳಷ್ಟು ಬುಜರು ಮತ್ತು ಬೀಳು ಭೂಮಿಯನ್ನು ಈ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡಿಸಲು ಉದ್ದೇಶಿಸಲಾಗಿದೆ

67 ರಾಜ್ಯದಲ್ಲಿ ಶ್ರೀಗಂಧದ ಮರಗಳನ್ನು ಬಳಸುವುದಕ್ಕೆ ಪ್ರೋತ್ಸಾಹ ನೀಡಲು, ನನ್ನ ಸರ್ಕಾರವು ಕರ್ನಾಟಕ ಅರಣ್ಯ ಅಧಿನಿಯಮಕ್ಕೆ ತಿದ್ದುಪಡಿ ಮಾಡಿದ್ದು ಖಾನಗಿ ಭೂಮಿಯಲ್ಲಿ ಬೆಳೆದ ಶ್ರೀಗಂಧದ ಮರಗಳ ಒಡೆತನವನ್ನು ಭೂಮಾಲೀಕರಿಗೆ ವಹಿಸಿಕೊಟ್ಟಿದೆ ಸರ್ಕಾರಿ ಆದೇಶ ಹೊರಡಿಸಿ ಮರದ ಪಟ್ಟಾ ಹಕ್ಕನ್ನು ಗಿರಿಜನ ಕುಟುಂಬಗಳಿಗೆ ಮಂಜೂರು ಮಾಡಲಾಗಿದೆ ಗುತ್ತಿಗೆ ಪದ್ಧತಿಯನ್ನು ರದ್ದುಮಾಡಿದೆ ನಣ್ಣ ಅರಣ್ಯ ಉತ್ಪನ್ನಗಳಿಂದ ಬರುವ ಆದಾಯವನ್ನು ಗಿರಿಜನ ಸಂಘಗಳಿಗೆ ನೀಡಲಾಗಿದೆ ಈ ಯೋಜನೆಯಿಂದ ನುಮಾರು 27 400 ಕುಟುಂಬಗಳು ಇರುವ 21 ಸಂಘಗಳಿಗೆ ಪ್ರಯೋಜನವಾಗುತ್ತದೆ

68 ಜಲಾನಯನ ಪ್ರದೇಶಗಳಲ್ಲಿ ಕಡಿಮ ಮಳೆ ಬಿದ್ದ ಕಾರಣದಿಂದಾಗಿ ಭಾರಿ ಜಲ ವಿದ್ಯುತ್ ಜಲಾಶಯಗಳಲ್ಲಿ ನೀರಿನ ನಂಗ್ರಹಣೆ, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 40ರಷ್ಟು ಕಡಿಮೆ ಆಗಿದೆ ತತ್ಪರಿಣಾಮವಾಗಿ ಜಲ ವಿದ್ಯುತ್ ಉತ್ಪಾದನೆಯಲ್ಲಿ ಉಂಟಾದ ಕೊರತೆಯನ್ನು ಖಾನಗಿ ವಿದ್ಯುತ್ ಉತ್ಪಾದಕರಿಂದ ಮತ್ತು ಇತರ ದುಬಾರಿ ಮೂಲಗಳಿಂದ ವಿದ್ಯುತ್ ಪಡದುಕೊಳ್ಳುವ ಮೂಲಕ ನರಿದೂಗಿಸಿಕೊಳ್ಳಬೇಕಾಗಿದೆ ಕರ್ನಾಟಕ ವಿದ್ಯುತ್ ಪ್ರನರಣಾ ನಿಗಮವು ದೈನಂದಿನ ವಿದ್ಯುತ್ ನರಬರಾಜನ್ನು ಕಳೆದ ವರ್ಷದ ಮಟ್ಟದಲ್ಲೇ ನಿಭಾಯಿಸಿಕೊಂಡು ಬಂದಿದೆ ಆದರೆ ಮುಂಬರುವ ತಿಂಗಳುಗಳಲ್ಲಿ ವಿಸ್ಥಿತಿಯು ಹೆಚ್ಚು ಕಠಿಣವಾಗುವ ನಂಭವವಿದೆ ಇಂಥ ವಿಸ್ಥಿತಿಯಿಂದಾಗಿ ವಿದ್ಯುತ್ತನ್ನು ಒದಗಿನುವ ನಲುವಾಗಿ ದುಬಾರಿ ಬೆಲೆ ತೆತ್ತು ವಿದ್ಯುತ್ತನ್ನು

ಸಂಗ್ರಹಿಸುತ್ತಿರುವ ಕೆ ಪಿ ಟಿ ಸಿ ಎಲ್ ಗೆ ಬೆಂಬಲ ನೀಡಲು ಮತ್ತು ಸಹಾಯಧನ ನೀಡಲು ಪ್ರಸಕ್ತ ವರ್ಷದಲ್ಲಿ ' 300 ಕೋಟಿ ರೂಪಾಯಿಗಳನ್ನು ಒದಗಿಸಬೇಕಾಗಿ ಬಂದದ್ದರಿಂದ ನನ್ನ ಸರ್ಕಾರದ ಮೇಲೆ ಹೆಚ್ಚಿನ ಹಣಕಾಸಿನ ಹೊರೆ ಬಿದ್ದಿದೆ

69 ವಿದ್ಯುಚ್ಛಕ್ತಿ ವಲಯದಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ಮತ್ತು ಸುಧಾರಣೆಗಳನ್ನು ತರಲು ನನ್ನ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ 2002ರ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ಅಧಿನಿಯಮವನ್ನು ಅಂಗೀಕರಿಸಲಾಗಿದ್ದು ಇದು ವಿದ್ಯುಚ್ಛಕ್ತಿಯನ್ನು ಕಳವು ಮಾಡುತ್ತಿರುವ/ ಕಳವು ಮಾಡಲು ದುಷ್ಪ್ರೇರಣೆ ನೀಡುವ ಅಪರಾಧಿಗಳನ್ನು ಕಠಿಣವಾಗಿ ದಂಡಿಸಲು ಅವಕಾಶ ಕಲ್ಪಿಸುತ್ತದೆ ಮೀಟರ್ ಅಳವಡಿಸಿಲ್ಲದ ಎಲ್ಲ ಸಂಪರ್ಕಗಳಿಗೆ ಮೂರು ವರ್ಷದಲ್ಲಿ ಮೀಟರ್ ಅಳವಡಿಸುವ ಸಾರ್ವತ್ರಿಕ ಕಾರ್ಯಕ್ರಮವೊಂದನ್ನು ಸಿದ್ಧಪಡಿಸಲಾಗಿದೆ ಪ್ರಾದೇಶಿಕ ಆಧಾರದ ಮೇಲೆ ರಾಜ್ಯದಲ್ಲಿ ವಿದ್ಯುತ್ ವಿತರಣಾ ಕಾರ್ಯವನ್ನು ವಿಂಗಡಿಸುವ ಮತ್ತು ವಿಕೇಂದ್ರೀಕರಣಗೊಳಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ ಬೆಂಗಳೂರು, ಮಂಗಳೂರು, ಹುಬ್ಬಳ್ಳಿ ಮತ್ತು ಗುಲ್ಬರ್ಗಾಗಳಲ್ಲಿ ಕೇಂದ್ರ ಕಚೇರಿ ಹೊಂದಿರುವ ನಾಲ್ಕು ವಿತರಣಾ ಕಂಪನಿಗಳನ್ನು ರಚಿಸಲು ಉದ್ದೇಶಿಸಲಾಗಿದೆ ವಿದ್ಯುತ್ ವಿತರಣಾ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಖಾಸಗಿ ವಲಯಗಳನ್ನು ಆಹ್ವಾನಿಸಲು ಮುಂದೆ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಅಲ್ಲದೆ ವಿತರಣಾ ಕಾಮಗಾರಿಗಳು ಗ್ರಾಮೀಣ ವಿದ್ಯುದೀಕರಣ, ಮುಂತಾದವುಗಳ ಸುಧಾರಣೆಗಾಗಿ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮವು ಹಣ ಹೂಡುತ್ತದೆ

70 ಶರಾವತಿ ಟೇಲ್ ರೇಸ್ ಯೋಜನೆಯ ಮೊದಲ ಮೂರು ಘಟಕಗಳು 2001ರಲ್ಲಿ ಯಶಸ್ವಿಯಾಗಿ ಕಾರ್ಯಾರಂಭ ಮಾಡಿದವು 4ನೇ ಘಟಕವು 2002ರ ಮಾರ್ಚ್ ತಿಂಗಳಲ್ಲಿ ಕಾರ್ಯಾರಂಭ ಮಾಡಲಿದೆ 210 ಮೆ ವಾ ಸಾಮರ್ಥ್ಯದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 7ನೇ ಘಟಕದ ಕಾಮಗಾರಿಯಲ್ಲಿ ಉತ್ತಮ ಪ್ರಗತಿಯಾಗಿದ್ದು ಈ ಘಟಕವು 2003ರ ಫೆಬ್ರುವರಿ ತಿಂಗಳ ಹೊತ್ತಿಗೆ ಕಾರ್ಯಾರಂಭ ಮಾಡಲು ಸಿದ್ಧಗೊಳ್ಳಲಿದೆ ಆಲಮಟ್ಟಿ ಅಣೆಕಟ್ಟು ವಿದ್ಯುದಾಗಾರ, ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಕಾಮಗಾರಿ ಮತ್ತು ಜಿಂದಾಲ್ ವಿದ್ಯುತ್ ಸ್ಥಾವರದ ವರ್ಧನೆ ಕಾಮಗಾರಿಗಳು ಸಹ ಪ್ರಾರಂಭಗೊಳ್ಳಲಿದ್ದು ಈ ಯೋಜನೆಗಳು ಪೂರ್ಣಗೊಂಡಾಗ ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯಕ್ಕೆ ಒಟ್ಟಾರೆ 1,000 ಮೆ ವಾ ವಿದ್ಯುತ್ ಸೇರ್ಪಡೆಯಾಗಲಿದೆ ಅಸಾಂಪ್ರದಾಯಿಕ ವಿದ್ಯುತ್ ಉತ್ಪಾದನಾ ಮೂಲಗಳಿಂದ 318 85 ಮೆ ವಾ ಸ್ಥಾಪಿತ ಸಾಮರ್ಥ್ಯದ ಐವತ್ತೆರಡು ಪ್ರಾಜೆಕ್ಟ್‌ಗಳು 2001ರ ನವೆಂಬರ್ ತಿಂಗಳ ಅಂತ್ಯದಲ್ಲಿ ಕಾರ್ಯಾರಂಭ ಮಾಡಿವೆ

71 ಯುಕ್ತ ಬೆಲೆಯಲ್ಲಿ ಎಲ್ಲ ಗ್ರಾಹಕರಿಗೆ ವಿಶ್ವಾಸನೀಯ ಗುಣಮಟ್ಟದ ವಿದ್ಯುತ್ ಸರಬರಾಜನ್ನು ಮಾಡುವ ಮತ್ತು ಅದೇ ಸಮಯದಲ್ಲಿ ವಿದ್ಯುತ್ ಬಳಕೆದಾರರಿಗೆ ಖಾತರಿಯಾಗಿ ವಿದ್ಯುತ್ ಒದಗಿಸುವ ಉದ್ದೇಶದೊಂದಿಗೆ ವಿದ್ಯುತ್ ವಲಯದಲ್ಲಿ ಈಗಾಗಲೇ ಕೈಗೊಂಡಿರುವ ಸುಧಾರಣೆಗಳನ್ನು ಮುಂದುವರಿಸಲು ನನ್ನ ಸರ್ಕಾರವು ಬದ್ಧವಾಗಿದೆ

72 ''ಭೂಮಿ'' ಕಾರ್ಯಕ್ರಮವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲಾಗಿದೆ ಈಗ, 140 ಕಂಪ್ಯೂಟರ್ ಕಿಯಾಸ್ಕ್‌ಗಳು ಕೆಲಸ ಮಾಡುತ್ತಿವೆ ಮುಂದಿನ 2 ತಿಂಗಳಲ್ಲಿ ಇನ್ನುಳಿದ 37 ತಾಲ್ಲೂಕುಗಳನ್ನು ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡಿಸಲಾಗುವುದು ಗಣಕೀಕರಿಸಿದ ಸುಮಾರು 200 ಲಕ್ಷ ಭೂ ದಾಖಲೆಗಳನ್ನು ರೈತರಿಗೆ ಆನ್ ಲೈನ್‌ನಲ್ಲಿ ದೊರೆಯುವಂತೆ ಮಾಡಲಾಗಿದೆ ''ನೋಂದಣಿ'' ಕಾರ್ಯಕ್ರಮದ ಅಡಿಯಲ್ಲಿ ಬೆಂಗಳೂರಿನಲ್ಲಿರುವ ಎಲ್ಲಾ 12 ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ದಾಖಲೆ ಕುರಿತ ಕೆಲಸ ಕಾರ್ಯಗಳನ್ನು ಗಣಕೀಕೃತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ನಾಗರಿಕರು ದಾಖಲೆಗಳನ್ನು ನೋಂದಣಿಗಾಗಿ ಸಲ್ಲಿಸಿದ ದಿನವೇ ನೋಂದಾಯಿತ ದಾಖಲೆಗಳನ್ನು ಪಡೆಯಲು ಈಗ ಸಾಧ್ಯವಾಗಿದೆ ನೋಂದಣಿ ವಿಧಾನವು ಸರಳ ಹಾಗೂ ದೋಷಮುಕ್ತವಾಗುವಂತೆ ಮಾಡಲು ಮುಂಬರುವ ದಿನಗಳಲ್ಲಿ ''ಭೂಮಿ'' ಮತ್ತು ''ನೋಂದಣಿ'' ಕಾರ್ಯಕ್ರಮಗಳನ್ನು ಪರಸ್ಪರ ಕೂಡಿಸಲು ಉದ್ದೇಶಿಸಲಾಗಿದೆ

73 ಇತ್ತೀಚಿನವರೆಗೂ, ರಾಜ್ಯದಲ್ಲಿರುವ ದತ್ತಿ ದೇವಾಲಯಗಳು ಮತ್ತು ಸಂಸ್ಥೆಗಳು 5 ಬೇರೆ ಬೇರೆ ಅಧಿನಿಯಮಗಳ ವ್ಯಾಪ್ತಿಗೆ ಒಳಪಟ್ಟಿದ್ದವು ಈಗ ಒಂದೇ ದತ್ತಿ ಅಧಿನಿಯಮವನ್ನು ಅಂಗೀಕರಿಸಲಾಗಿದ್ದು, ಅದಕ್ಕೆ ರಾಷ್ಟ್ರಪತಿಯವರ ಅನುಮತಿ ದೊರಕಿದೆ ನಿಯಮಗಳನ್ನು ರಚಿಸಲಾಗುತ್ತಿದ್ದು, ಈ ಏಕರೂಪ ನಿಯಮಗಳನ್ನು ರಾಜ್ಯದಲ್ಲಿರುವ ಎಲ್ಲಾ ದತ್ತಿ ಸಂಸ್ಥೆಗಳಲ್ಲಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ

74 ನ್ಯಾಯಾಲಯಗಳಲ್ಲಿ ಮೊಕದ್ದಮೆಗಳ ಹೊರೆ ಅತಿ ಹೆಚ್ಚಾಗಿದೆ ಬಾಕಿ ಮೊಕದ್ದಮೆಗಳ ಸಂಖ್ಯೆ ಕಡಿಮೆ ಮಾಡಲು ವಿವಿಧ ರೀತಿಯಲ್ಲಿ ಪ್ರಯತ್ನ ಮಾಡಲಾಗುತ್ತಿದೆ ಮೊಕದ್ದಮೆಗಳ ತ್ವರಿತ ಎಲೆಗಾಗಿ ಹೆಚ್ಚುವರಿ ನ್ಯಾಯಾಲಯಗಳನ್ನು ಮಂಜೂರು ಮಾಡುವ ಯೋಜನೆಯನ್ನು ಮೈಸೂರು ಜಿಲ್ಲೆಗೆ ವಿಸ್ತರಿಸಲಾಗಿದ್ದು ಇದನ್ನು ಬೆಳಗಾಂ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೂ ವಿಸ್ತರಿಸಲಾಗುತ್ತದೆ ನ್ಯಾಯಾಂಗ ಬಂಧನದಲ್ಲಿರುವ ಆರೋಪಿತರ ಸೆಷನ್ಸ್ ಮೊಕದ್ದಮೆಗಳ ಎಲೆಗಾಗಿ ಮತ್ತು ಬಹಳ ಕಾಲದಿಂದಲೂ ಬಾಕಿಯಿರುವ ಮೊಕದ್ದಮೆಗಳ ವಿಲೆಗಾಗಿ 13 ಶೀಘ್ರ ವಿಚಾರಣಾ ನ್ಯಾಯಾಲಯಗಳ ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆ ನಕಲಿ ಛಾವಾ ಕಾಗದ ಪ್ರಕರಣ, ಚರ್ಚ್ ಬಾಂಬ್ ಸ್ಫೋಟ ಪ್ರಕರಣ, ಕಂಬಾಳ್ಳಿವಲ್ಲಿ ಕೋಮು ಗಲಭೆ

ವ್ಯಕರಣ ದಂಡುಪಾಳ್ಯ ಗ್ಯಾಂಗ್ ವ್ಯಕರಣದಂದ ಅತೀ ಸೂಕ್ಷ್ಮ ಮತ್ತು ಮಹತ್ವದ ವಿಷಯಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ವಿಚಾರಣೆ ಮಾಡಲು ನಾಲ್ಕು ವಿಶೇಷ ನ್ಯಾಯಾಲಯಗಳನ್ನು ರಚಿಸವೇಕೆಂದು ಉಚ್ಚ ನ್ಯಾಯಾಲಯವನ್ನು ಕೇಳಿಕೊಳ್ಳಲಾಗಿದ

75 2001ನೇ ವರ್ಷದಲ್ಲಿ ರಾಜ್ಯದ ಬಹುತೇಕ ಎಲ್ಲಾ ಅಧೀನ ನ್ಯಾಯಾಲಯಗಳಲ್ಲಿ ಲೋಕಲ್ ಏರಿಯಾ ನೆಟ್‌ವರ್ಕ್ ಅಳವಡಿಸುವ ಮತ್ತು ಪವರ್ ಕೇಬಲನ್ನು ಹಾಕುವ ಕಾರ್ಯವು ಮುಗಿದಿದ್ದು ಅವು ಕಾರ್ಯಾರಂಭ ಮಾಡಿವೆ ನ್ಯಾಯಿಕ ಅದಿಕಾರಿಗಳು ಮತ್ತು ಲಿಪಿಕ ಸಿಬ್ಬಂದಿಗ ಕಂಪ್ಯೂಟರ್ ತರಬೇತಿಯನ್ನು ನೀಡಲಾಗುತ್ತಿದೆ

76 ರಾಜ್ಯ ಅಧಿನಿಯಮಗಳು ಜನರಿಗೆ ಸುಲಭವಾಗಿ ದೊರೆಯುವಂತೆ ಮಾಡಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಹೊಸ ಅಧಿನಿಯಮಗಳನ್ನು ವೆಬ್‌ಸೈಟ್‌ನಲ್ಲಿ ಹಾಕಿ ಅವು ಸಾರ್ವಜನಿಕರಿಗೆ ದೊರೆಯುವಂತೆ ಮಾಡುವ ಕ್ರಮ ಕೈಗೊಳ್ಳಲಾಗುತ್ತಿದೆ 32 ಕೇಂದ್ರ ಅಧಿನಿಯಮಗಳ ಮತ್ತು 5 ರಾಜ್ಯ ಅಧಿನಿಯಮಗಳ ಕನ್ನಡ ಭಾಷಾಂತರ ಕಾರ್ಯ ಪೂರ್ಣಗೊಂಡಿದ್ದು ಅವು ಪುಸ್ತಕ ರೂಪದಲ್ಲಿ ದೊರೆಯಲಿವೆ 2002-03ರ ಅವಧಿಯಲ್ಲಿ ಇನ್ನಷ್ಟು ಕಾರ್ಯವನ್ನು ಕೈಗೊಳ್ಳಲಾಗುವುದು ರಾಜ್ಯದಲ್ಲಿ ಜಾರಿಯಲ್ಲಿರುವ ಅಧಿನಿಯಮದ ವ್ರತಿಗಳು ಈಗ ಘ್ಲಾಪಿಯಲ್ಲಿ ದೊರಕುತ್ತವೆ ಅವುಗಳನ್ನು ಸಾರ್ವಜನಿಕರಿಗೆ ಸರ್ಕಾರದ ಕಚೇರಿಗಳಿಗೆ, ವಕೀಲರಿಗೆ ಮತ್ತು ನ್ಯಾಯಾಲಯಗಳಿಗೆ ಎದಗಿಸಲಾಗುವುದು

77 ವ್ರವಾಸೋದ್ಯಮವು ರಾಜ್ಯಕ್ಕೆ ಹೆಚ್ಚಿನ ಆದಾಯ ತರುವ ಉದ್ಯಮವಾಗಬಲ್ಲದು ರೈಲ್ವೆ ಮಂತ್ರಾಲಯದ ಸಹಕಾರದೊಂದಿಗೆ ವ್ಯಾಲೇಸ್ ಆನ್ ವ್ಹೀಲ್ಸ್'' ರೈಲನ್ನು ವ್ರಾರಂಭಿಸಲು ನಿರ್ಧರಿಸಲಾಗಿದೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಒಂದು ಕಾರ್ಯತಂಡವನ್ನು ರಚಿಸಲಾಗಿದೆ ವಿಶ್ವ ಸಂಸ್ಥೆಯು, 2002ನೇ ವರ್ಷವನ್ನು ವರಿಸರ ವ್ರವಾಸೋದ್ಯಮ ವರ್ಷವಂಬುದಾಗಿ ಘೋಷಿಸಿದ್ದು ಈ ಕ್ಷೇತ್ರದಲ್ಲಿ ಕರ್ನಾಟಕದ ಅಂತರ್‌ನಿಹಿತ ಬಲವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲಾಗುವುದು

78 ಅಬಿವೃದ್ಧಿ ಕಾರ್ಯದಲ್ಲಿ ರಾಜ್ಯ ಸರ್ಕಾರವು ಪೂರ್ಣವಾಗಿ ತನ್ನ ಸಂಪನ್ಮೂಲಗಳನ್ನೇ ನಂಬಿಕೊಂಡಿರಲು ಸಾಧ್ಯವಿಲ್ಲ 2001-02ನೇ ಸಾಲಿನಲ್ಲಿ ಗ್ರಾಮೀಣ ನೀರು ಸರಬರಾಜು ನಗರ ನೀರು ಸರಬರಾಜು, ಆರೋಗ್ಯ ಸೇವೆ ನಗರ ಮೂಲ ಸೌಲಭ್ಯ ಕೈಗಾರಿಕೆಗಳು ನೀರಾವರಿ ಅರಣ್ಯ ರಸ್ತೆಗಳು ಕೃಷಿ ಮತ್ತು ವಿದ್ಯುಚ್ಛಕ್ತಿಗಳಂಥ ವಲಯಗಳಲ್ಲಿ 17 ವಿದೇಶಿ ನೆರವಿನ ಯೋಜನೆಗಳನ್ನು ಜಾರಿಗೊಳಿಸಲಾಗಿದೆ 2001-02ನೇ ಸಾಲಿನಲ್ಲಿ ಕರ್ನಾಟಕ ಆರ್ಥಿಕ ಪುನರ್ ರಚನೆ ಕಾರ್ಯಕ್ರಮ (150

ದಶಲಕ್ಷ ಡಾಲರ್) ಕರ್ನಾಟಕ ರಾಜ್ಯ ಹೆದ್ದಾರಿಗಳ ಕಾರ್ಯಕ್ರಮ (360 ದಶಲಕ್ಷ ಡಾಲರ್) ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ (100 ದಶಲಕ್ಷ ಡಾಲರ್) ಮತ್ತು ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ ಯೋಜನೆ ಹಂತ II (152 ದಶಲಕ್ಷ ಡಾಲರ್) ಈ ಯೋಜನೆಗಳಿಗೆ ಸಂಬಂಧಿಸಿದಂತೆ ವಿಶ್ವಬ್ಯಾಂಕಿನೊಂದಿಗೆ ಯಶಸ್ವಿಯಾಗಿ ಮಾತುಕತೆ ನಡೆಸಲಾಗಿದೆ 705 58 ಕೋಟಿ ರೂಪಾಯಿಗಳ ಮೊತ್ತದ ಕರ್ನಾಟಕ ಆರ್ಥಿಕ ಪುನರ್ ರಚನೆ ಕಾರ್ಯಕ್ರಮಕ್ಕಾಗಿ ಸಾಲದ ಮೊದಲ ಕಂತನ್ನು ಪಡೆಯಲಾಗಿದೆ ಇತರ ಯೋಜನೆಗಳ ವಿಷಯದಲ್ಲಿ ಯೋಜನೆಗಳಿಗೆ ಮೊದಲು ಖರ್ಚು ಮಾಡಿ ಖರ್ಚಿನ ಹಣವನ್ನು ನೇರವಾಗಿ ಪಡೆಯಲಾಗುವುದು

79 ನನ್ನ ಸರ್ಕಾರವು, 2000ದ ಏಪ್ರಿಲ್‌ನಲ್ಲಿ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಆಡಳಿತ ಸುಧಾರಣಾ ಆಯೋಗವನ್ನು ರಚಿಸಿತ್ತು ಆಯೋಗವು 2001ರ ಜನವರಿಯಲ್ಲಿ ಮಧ್ಯಂತರ ವರದಿಯನ್ನು ಸಲ್ಲಿಸಿತು ಅದರಲ್ಲಿನ ಅನೇಕ ಶಿಫಾರಸ್ಸುಗಳನ್ನು ಅಂದಿನಿಂದಲೇ ಅನುಷ್ಠಾನಗೊಳಿಸಲಾಗಿದೆ ವರ್ಗಾವಣೆ ವಿಷಯದಲ್ಲಿ ಅನುಸರಿಸಬೇಕಾದ ವಿಧಾನಕ್ಕೆ ಸಂಬಂಧಪಟ್ಟ ಆದೇಶಗಳನ್ನು ಸರ್ಕಾರವು ಹೊರಡಿಸಿದೆ ಸಚಿವಾಲಯದಲ್ಲಿ ಲೋಕಲ್ ಏರಿಯಾ ನೆಟ್ ವರ್ಕ್ ಅಳವಡಿಸುವ ಕಾರ್ಯ ಬಹುಪಾಲು ಮುಗಿದಿದ್ದು ಆ ವ್ಯವಸ್ಥೆಯೂ ಇಷ್ಟರಲ್ಲೇ ಕಾರ್ಯಾರಂಭ ಮಾಡಲಿದೆ ಬೆಂಗಳೂರಿನ ಎಲ್ಲಾ ಆರ್‌ಟಿಓ ಕಚೇರಿಗಳು ಗಣಕೀಕರಣಗೊಂಡಿವೆ, ಬೆಂಗಳೂರಿನ ಸಬ್ ರಿಜಿಸ್ಟ್ರಾರರ ಕಚೇರಿಗಳೂ ಸಹ ಗಣಕೀಯಕರಣಗೊಂಡಿವೆ ಹಾಗೆಯೇ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಭ್ರಷ್ಟಾಚಾರ ನಿವಾರಣೆ ಸಮಿತಿಯನ್ನು ರಚಿಸಲಾಗಿದೆ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ನಾಗರಿಕ ಸನ್ನದುಗಳನ್ನು ಸಿದ್ಧಪಡಿಸಿ ಕಳಿಹಿಸಲಾಗಿದೆ ಮತ್ತು ಅವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಆಡಳಿತ ಸುಧಾರಣಾ ಆಯೋಗವು 2001ರ ಡಿಸೆಂಬರ್‌ನಲ್ಲಿ ತನ್ನ ಅಂತಿಮ ವರದಿಯನ್ನು ಸಲ್ಲಿಸಿದ್ದು, ಈ ವರದಿಯಲ್ಲಿ ಇಲಾಖೆಗಳ ಪುನರ್ ರಚನೆಗೆ ಸಂಬಂಧಪಟ್ಟಂತ ಕಲವು ಪ್ರಮುಖ ಶಿಫಾರಸ್ಸುಗಳನ್ನು ಮಾಡಲಾಗಿದೆ ಅವುಗಳನ್ನು ಸಂಬಂಧಪಟ್ಟ ಇಲಾಖೆಗಳು ಪರಿಶೀಲಿಸುತ್ತಿವೆ ಈ ಶಿಫಾರಸುಗಳ ಬಗ್ಗೆ ಒಂದು ವರ್ಷದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು

80 ನನ್ನ ಸರ್ಕಾರವು, 2000-01ರಿಂದ 2004-05ರ ಸಾಲಿಗಾಗಿ ಕರ್ನಾಟಕಕ್ಕೆ ಮಧ್ಯಾವಧಿ ಹಣಕಾಸು ಯೋಜನೆಯನ್ನು ಸಿದ್ಧಪಡಿಸಿ ಪ್ರಕಟಿಸಿದೆ ಸರ್ಕಾರವು ಹಣಕಾಸಿನ ಸಮತೋಲನ ತರಲು ಭೌತಿಕ ಮತ್ತು ಸಾಮಾಜಿಕ ಮೂಲ ಸೌಲಭ್ಯಗಳ ಗುಣಮಟ್ಟವನ್ನು ಸುಧಾರಿಸಲು ಮತ್ತು ಕರ್ನಾಟಕಕ್ಕೆ ಸ್ಪರ್ಧಾತ್ಮಕ ಪ್ರಯೋಜನ ದೊರೆಯುವಂತೆ ಮಾಡಲು ನಿರ್ಧರಿಸಿದೆ ಮಧ್ಯಾವಧಿ ಹಣಕಾಸು ಯೋಜನೆಯು,

ರಾಜ್ಯ ಸರ್ಕಾರವು, ಅಗತ್ಯ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಮತ್ತು ಅವೇಕ್ಷಿತ ದಿಸೆಯಲ್ಲಿ ಸಾಗುವುದಕ್ಕಾಗಿ ನೀಲಿ ನಕ್ಷೆಯೊಂದನ್ನು ನೀಡುತ್ತದೆ ಇದರ ಜೊತೆಗೆ ನನ್ನ ಸರ್ಕಾರವು 2001-02ರ ಸಾಲಗಾಗಿ ಆಡಳಿತ ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆಯನ್ನು ರೂಪಿಸಿದೆ ಪ್ರತಿವರ್ಷವೂ ಅಂಥ ಕ್ರಿಯಾ ಯೋಜನೆಯನ್ನು ರೂಪಿಸುವ ಪದ್ಧತಿಯನ್ನು ಮುಂದುವರೆಸುತ್ತದೆ ಇದು ಉತ್ತಮ ಮತ್ತು ಸುಧಾರಿತ ಆಡಳಿತಕ್ಕಾಗಿ ಮಾಡಲಿರುವ ವಿವಿಧ ಸುಧಾರಣೆಗಳಿಗೆ ಹಾಗೂ ಬದಲಾವಣೆಗಳಿಗೆ ಒತ್ತು ಕೊಡುತ್ತದೆ

81 ಸರ್ಕಾರವು ಕರ್ನಾಟಕದ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ವೀರಪ್ಪ ಮೊಯ್ಲಿಯವರ ಅಧ್ಯಕ್ಷತೆಯಲ್ಲಿ ತೆರಿಗೆ ಸುಧಾರಣಾ ಆಯೋಗವೊಂದನ್ನು ರಚಿಸಿತ್ತು ಆಯೋಗವು, 2001ರ ಫೆಬ್ರವರಿ 1ರಂದು ತನ್ನ ಪ್ರಥಮ ವರದಿಯನ್ನು ಹಾಗೂ ಅಕ್ಟೋಬರ್‌ನಲ್ಲಿ ಅಂತಿಮ ವರದಿಯನ್ನು ಸಲ್ಲಿಸಿದೆ ಆಯೋಗವು ಈ ವರದಿಗಳಲ್ಲಿ ತೆರಿಗೆ ಸ್ವರೂಪದ ಬಗ್ಗೆ ಸವಿವರವಾಗಿ ವಿಶ್ಲೇಷಣೆ ಮಾಡಿದ್ದು ಅಮೂಲ್ಯವಾದ ಶಿಫಾರಸ್ಸುಗಳನ್ನು ಮಾಡಿದೆ ಸರ್ಕಾರವು ಅವುಗಳನ್ನು ಪರಿಶೀಲಿಸುತ್ತಿದೆ ಮೌಲ್ಯವರ್ಧಿತ ತೆರಿಗೆಯನ್ನು ಜಾರಿಗೆ ತಂದಾಗ ಮಾರಾಟ ತೆರಿಗೆಯನ್ನು ವಿಧಿಸುವ ಮತ್ತು ವಸೂಲು ಮಾಡುವ ವಿಧಾನದಲ್ಲಿ ಗಮನಾರ್ಹ ಸುಧಾರಣೆ ಆಗಲಿದೆ ಈ ಸಂಬಂಧವಾಗಿ ಭಾರತ ಸರ್ಕಾರ, ಅವಶ್ಯ ನಿರ್ಧಾರ ತೆಗೆದುಕೊಳ್ಳುವುದೆಂದು ಮತ್ತು ಮೌಲ್ಯವರ್ಧಿತ ತೆರಿಗೆಯನ್ನು ಜಾರಿಗೆ ತಂದಾಗ ರಾಜ್ಯ ಸರ್ಕಾರಗಳಿಗೆ ಅಗತ್ಯವಾಗಬಹುದಾದ ಹಣಕಾಸು ನೆರವನ್ನು ಒದಗಿಸುವುದೆಂದು ಆಶಿಸಲಾಗಿದೆ

82 ಮುಂಬರುವ ವರ್ಷವು ಅತ್ಯಂತ ಮಹತ್ವಪೂರ್ಣವಾಗಿದೆ ರಾಜ್ಯದಲ್ಲಿ ನೆಲೆಸಿರುವ ಶಾಂತಿ ಮತ್ತು ಸುವ್ಯವಸ್ಥೆಯನ್ನು ಹಾಳು ಮಾಡುವ ದುಷ್ಟ ಶಕ್ತಿಗಳ ಮೇಲೆ ನಿರಂತರವಾಗಿ ನಿಗಾ ಇಡಲೇ ಬೇಕಾಗಿದೆ ಕ್ರಿಯಾಶೀಲ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಉತ್ತೇಜನ ನೀಡುವಂಥ ವಿವಿಧ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ನನ್ನ ಸರ್ಕಾರವು ಮುಂದುವರೆಸುತ್ತದೆ ಆದರೂ ಈಗಿರುವ ಆರ್ಥಿಕ ಪರಿಸ್ಥಿತಿಗಳಲ್ಲಿ ನಮ್ಮ ಅಭಿವೃದ್ಧಿ ಮತ್ತು ಸುಧಾರಣಾ ಗುರಿಗಳನ್ನು ಸಾಧಿಸಬೇಕಾದರೆ ನಾವು ಮಿತವ್ಯಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಕರ್ನಾಟಕ ಜನರ ಏಳಿಗೆಗಾಗಿ ಶ್ರಮಿಸುತ್ತಿರುವ ನನ್ನ ಸರ್ಕಾರಕ್ಕೆ ಈ ರಾಜ್ಯದ ಪ್ರಬುದ್ಧ ಶಾಸಕರುಗಳೆಲ್ಲರೂ ಬೆಂಬಲ ನೀಡುತ್ತಾರೆಂಬ ವಿಶ್ವಾಸ ನನಗಿದೆ ತಮ್ಮೆಲ್ಲರಿಗೆ ಮತ್ತು ಕರ್ನಾಟಕದ ನಂದನಶೀಲ ಜನತೆಗೆ ನನ್ನ ಶುಭ ಹಾರೈಕೆಗಳು

ಜೈ ಕರ್ನಾಟಕ, ಜೈ ಹಿಂದ್

ಮಾನ್ಯ ರಾಜ್ಯಪಾಲರು ತಮ್ಮ ಭಾಷಣವನ್ನು ಮಧ್ಯಾಹ್ನ 12 10ಕ್ಕೆ ಮುಕ್ತಾಯಗೊಳಿಸಿದರು

(ಮಾನ್ಯ ರಾಜ್ಯಪಾಲರ ಭಾಷಣದ ನಂತರ ಸದನವನ್ನು ಮುಂದೂಡಲಾಯಿತು)

(ಸದನವು ಪುನಃ 12 35ಕ್ಕೆ ಸಮಾವೇಶಗೊಂಡಿತು)